ಅಚಲ

2

ಮೇ 8, 1990, ಬೆಲೆ : ರೂ. 1-50



ಡಾ|| ಬಿ ಎನ್ ಸುಮಿತ್ರಾಬಾಯಿ
ಡಾ|| ವಿಜಯಾ ದಬ್ಬೆ
ನೇಮಿಚಂದ್ರ
ಹೆಚ್ ಎಸ್ ಪಾರ್ವತಿ
ಹೇಮಲತಾ ಮಹಿಷಿ

ಅಚಲ' ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ. ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಳಿಕಾವಲ್
ಬೆಂಗಳೂರು–560 003.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ :

ಎನ್. ಗಾಯತ್ರಿ, ದೇವಿ, ಭಾರತಿಕಿನ್ನಾಳ್, ನೇಮಿಚಂದ್ರ

ಕಲೆ : ಚಂದ್ರನಾಥ್

ಚಂದಾ ವಿವರ

ವಾರ್ಷಿಕ ಚಂದಾ :	ರೂ	10–00
ಬಿಡಿ ಪ್ರತಿ :	ರೂ	1–50
ವಿಶೇಷ ಪ್ರತಿ :	ರೂ	2–50
ಅಜೀವ ಚಂದಾ :	ರೂ	100–00

Printed at PRINTSWELL, 78, 2nd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560 003.
Editor : N. GAYATRI

ರಕ್ಷಕ್

ಎರಡು ವರ್ಷದ ಹಿಂದೆ ದೆಹಲಿಯಲ್ಲಿ ಬಸ್‌ನಲ್ಲಿ ಸಂಚರಿಸುತ್ತಿದ್ದಾಗ ಹಲ್ಲೆಗೊಳಗಾದ ಮೊನಿಷಾವರ್ಮ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಿದ್ದು ಇನ್ನೂ ನೆನಪಿನಿಂದ ಮಾಸಿಲ್ಲ. ಭಾರತ ಸರ್ಕಾರ ಕಳೆದ ತಿಂಗಳು ಅವಳಿಗೆ 'ಶೌರ್ಯ ಚಕ್ರ' ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಈ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಮಹಿಳೆ ಇವಳು. 'ಶೌರ್ಯ ಚಕ್ರ' ಪ್ರಶಸ್ತಿಯನ್ನು ಪಡೆದ ಮೊದಲ ಮಹಿಳೆಯೆಂಬ ಕೀರ್ತಿಗೆ ಪಾತ್ರಳಾದ ಮೊನಿಷಾ ಈಗ ದೆಹಲಿಯಲ್ಲಿ 'ರಕ್ಷಕ್' ಎಂಬ ಸಂಸ್ಥೆಯನ್ನು ಕಟ್ಟಿ ಹೆಣ್ಣು ಮಕ್ಕಳಿಗೆ ಕರಾಟೆ, ಜುಡೋ ಹಾಗೂ ಸ್ವಯಂ ರಕ್ಷಣೆಯ ವಿವಿಧ ತರಬೇತಿಯನ್ನು ನೀಡುವ ಕಾರ್ಯದಲ್ಲಿ ತೊಡಗಿದ್ದಾಳೆ. ಬಾಲ್ಯ, ಯೌವನ ಹಾಗೂ ವೃದ್ಧಾಪ್ಯದಲ್ಲಿ ಪುರುಷನ ರಕ್ಷಣೆ ಬೇಕೆಂದ ಭಾರತೀಯ ಸಂಸ್ಕೃತಿಗೆ ಇದೊಂದು ಹೊಸ ಸವಾಲು ಎನ್ನೋಣವೇ ?

ಸತ್ಯ ಯಾವುದು ?

ಕೋವಲಮ್ ಬೀಚ್‌ನ ಪ್ರವಾಸಿತಾಣದಲ್ಲಿ ಯುರೋಪಿನ ಪ್ರವಾಸಿ ಮಹಿಳೆಯೊಬ್ಬಳ ಮೇಲೆ ನಡೆಯಿತೆನ್ನಲಾದ ಅತ್ಯಾಚಾರ ಘಟನೆ ನಿಜಕ್ಕೂ ಅಕ್ಷಮ್ಯ. ಇಂತಹ ಘಟನೆ ಮತ್ತೆ ಮರುಕಳಿಸದಂತೆ ಹಾಗೂ ಶಾಂತಿ ಹಾಗೂ ರಕ್ಷಣೆಯ ವ್ಯವಸ್ಥೆ ಇನ್ನೂ ಹೆಚ್ಚು ಬಿಗಿಯಾಗಿ ನಡೆಸುವಂತೆ ಸಂಬಂಧಪಟ್ಟವರ ಮೇಲೆ ಒತ್ತಾಯ ತರುವಂತೆ ಮಾಡುವುದು ಯಾರೂ ಒಪ್ಪುವಂಥ ಮಾತು.

ಆದರೆ ಹೆಣ್ಣಿಗೆ ಸಂಬಂಧಿಸಿದ ಈ ಸಮಸ್ಯೆಯನ್ನು ತೆಗೆದುಕೊಂಡು ಕೇರಳದಲ್ಲಿ ನಡೆಯುತ್ತಿರುವ ರಾಜಕೀಯ ಬೇಸರ ಹುಟ್ಟಿಸುತ್ತದೆ. ಅಲ್ಲಿನ ಮುಖ್ಯಮಂತ್ರಿ ನಾಯನಾರ್ ಅತ್ಯಾಚಾರವನ್ನು ಬೆಂಬಲಿಸಿ ಹಗುರವಾಗಿ ಮಾತನಾಡಿದರೆಂದು ಒಂದು ಗುಂಪಿನ ಪತ್ರಿಕೆಗಳು ಹಾಗೂ ಜನರು ತಾರಕಸ್ವರದಲ್ಲಿ ಅರಚಲಾರಂಭಿಸಿದ್ದಾರೆ. ಮತ್ತೊಂದು ಕಡೆ ಇವನ್ನೆಲ್ಲಾ ಸಂಪೂರ್ಣವಾಗಿ ಬಹಿರಂಗವಾಗಿ ನಿರಾಕರಿಸುವ ನಾಯನಾರ್ ಹೆಣ್ಣಿನ ಪರವಾದ ಎಷ್ಟೋ ಹೋರಾಟಗಳಲ್ಲಿ ಭಾಗಿಯಾಗಿರುವ ತಾನು ಅಂತಹ ಮಾತು ಆಡಲು ಸಾಧ್ಯವೇ ? ಎಂದು ಪ್ರಶ್ನಿಸಿದ್ದಾರೆ.

ಹಾಗಾದರೆ ಸತ್ಯ ಯಾವುದು ?

ಕೇರಳದಲ್ಲಿ ಮಹಿಳೆ

○ ಹೇಮಲತಾ ಮಹಿಷಿ

ಭಾರತದಲ್ಲಿ ಮಹಿಳೆಯರ ಸ್ಥಾನ-ಮಾನದ ಬಗ್ಗೆ, ಆ ಸ್ಥಾನಮಾನವನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿಚಾರ ಮಾಡುವಾಗ ಕೇರಳರಾಜ್ಯ ಉಳಿದೆಲ್ಲ ರಾಜ್ಯಗಳಿಗಿಂತ ಬೇರೆಯಾಗಿಯೇ ನಿಲ್ಲುತ್ತದೆ. ಅದಕ್ಕೆ ಅಲ್ಲಿರುವ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳೇ ಕಾರಣ. ಐತಿಹಾಸಿಕವಾಗಿ, ಪೌರಾಣಿಕವಾಗಿ 'ಮಲೆಯಾಳ' ಎಂದರೆ 'ಮಹಿಳೆಯರ ರಾಜ್ಯ' ಎಂದೇ ಗುರುತಿಸಲ್ಪಟ್ಟಿದ. ಮಹಿಳೆಗೆ ಆ ರಾಜ್ಯದಲ್ಲಿ ಆರಂಭ ದಿಂದಲೂ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದ್ದಾರೆ. ಭಾರತದ ಉಳಿದೆಡೆ ಗಂಡು ಸಂತಾನಕ್ಕೆ ಮಾತ್ರ ಆಸ್ತಿ ಹಕ್ಕು ಕೊಟ್ಟಿದ್ದರೆ, ಕೇರಳದ ಮರುಮಕಥಾಯಂ ಪದ್ಧತಿಯಂತೆ ಆಸ್ತಿ ಹಕ್ಕು ಮಹಿಳೆಯರ ಮೂಲಕವೇ ಲಭಿಸುತ್ತಿತ್ತು ಮತ್ತು ತಾಯಿಯ ಮೂಲಕ ಹೆಣ್ಣು ಮಕ್ಕಳು ಆಸ್ತಿಯ ಹೆಚ್ಚಿನ ಭಾಗಕ್ಕೆ ಹಕ್ಕುದಾರರಾಗುತ್ತಿದ್ದರು. ಅಲ್ಲದೆ, ಹೆಣ್ಣುಮಕ್ಕಳಿಗೆ ತಾಯಿಯ ಮನೆಯಲ್ಲಿ ವಾಸಿಸುವ ಹಕ್ಕು ಕೂಡಾ ಇದ್ದಿತು. ಸರಳ ವಿವಾಹ, ವಿಚ್ಛೇದನದ ಅವಕಾಶ, ವಿಧವಾ ವಿವಾಹಕ್ಕೆ ಮಾನ್ಯತೆ ಇವೆಲ್ಲ ಇದ್ದುದರಿಂದ ಮಹಿಳೆಯರ ಸ್ಥಾನಮಾನ ಕೇರಳ ದಲ್ಲಿ ಹೆಚ್ಚಿನ ಮಟ್ಟದಲ್ಲಿರುವುದರ ಬಗ್ಗೆ ಅಚ್ಚರಿ ಪಡ ಬೇಕಾದುದೇನೂ ಇಲ್ಲ.

ಮಹಿಳೆಯರ ಪ್ರಗತಿಗೆ ಶಿಕ್ಷಣ ಅತ್ಯಾವಶ್ಯಕ ಎನ್ನುವುದರ ಬಗ್ಗೆ ಎರಡನೆಯ ಮಾತಿಲ್ಲ. ಮಹಿಳೆಯರ ವಿದ್ಯಾಭ್ಯಾಸಕ್ಕೆ ಕೇರಳ ರಾಜ್ಯ ಕೊಟ್ಟಿರುವಷ್ಟು ಉತ್ತೇಜನವನ್ನು ಬಹುಶಃ ಮತ್ತಾವ ರಾಜ್ಯವೂ ಕೊಟ್ಟಿರಲಾರದು. ಅದರೊಂದಿಗೆ, ರಾಜ್ಯದ ಆರೋಗ್ಯ ಯೋಜನೆಗಳ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿರುವವರು ಅಲ್ಲಿಯ ಮಹಿಳೆಯರು. ಇದಕ್ಕೆ ಒಂದು ಮುಖ್ಯ ಕಾರಣ ಅಲ್ಲಿರುವ ಲಿಂಗ ಪ್ರಮಾಣ. ಅಖಿಲ ಭಾರತ ಅಂಕಿ-ಅಂಶದ ಪ್ರಕಾರ 1000 ಪುರುಷರಿಗೆ 934 ಮಹಿಳೆಯರಿದ್ದರೆ, ಕೇರಳದಲ್ಲಿ 1032 ಮಹಿಳೆಯರಿದ್ದಾರೆ. 1911 ರಲ್ಲಿಯೇ ಮಹಿಳೆಯರ ಪ್ರಮಾಣ 1011 ಇದ್ದಿತು ಕಳೆದ ಹಲವಾರು ದಶಕಗಳಿಂದ ಲಿಂಗಪ್ರಮಾಣ ಈ ರೀತಿ ಮಹಿಳೆಯರ ಪರವಾಗಿಯೇ ಇದೆ. ಕೇರಳದ ಒಟ್ಟು ಮಹಿಳೆಯರ ಜನಸಂಖ್ಯೆ 129 ಲಕ್ಷ, ಎಂದರೆ, ಒಟ್ಟು ಜನಸಂಖ್ಯೆಯ 50.73%.

ಕೇರಳದ ಮಹಿಳೆಯರ ವಿವಾಹದ ವಯಸ್ಸಿನ ಬಗ್ಗೆ ನೋಡಿದಾಗ ಕೂಡಾ ಅಲ್ಲಿಯ ಪರಿಸ್ಥಿತಿ ಭಾರತದ ಉಳಿದೆಲ್ಲ ಕಡೆಯ ಮಹಿಳೆಯರಿಗಿಂತಾ (ರಾಜಸ್ಥಾನದ ಬಗ್ಗೆಯಂತೂ ಹೇಳುವುದೇ ಬೇಕಿಲ್ಲ), ಬಹಳಷ್ಟು ಪ್ರಗತಿಪರವಾಗಿದೆ. ಅಖಿಲ ಭಾರತದ ಮಟ್ಟದಲ್ಲಿ ಮಹಿಳೆಯರು ವಿವಾಹವಾಗುವ ಸರಾಸರಿ ವಯಸ್ಸು 18.7 ಆಗಿದ್ದರೆ, ಕೇರಳದಲ್ಲಿ 21.9 ಇದೆ. 1901 ರಲ್ಲಿಯೇ ಕೇರಳದ ಮಹಿಳೆಯರು ವಿವಾಹವಾಗುವ ಸರಾಸರಿ ವಯಸ್ಸು 17 ಇದ್ದಿತೆಂದರೆ ಈಗ ಅದು 21 ಇರುವುದು ಹೆಚ್ಚಿನದೇನೂ ಅಲ್ಲ. ವಿವಾಹವೇ ಹೆಣ್ಣಿನ ಜೀವನದ ಅಂತಿಮ ಗುರಿ ಎನ್ನುವ ಭಾವನೆ ಅಲ್ಲಿಯ ಸಮಾಜಿಕ ವ್ಯವಸ್ಥೆಯಲ್ಲಿ ಇಲ್ಲದಿದ್ದುದರಿಂದ, ಹೆಣ್ಣು ಮಕ್ಕಳ ವಿವಾಹ ಮಾಡಲು ಸಾಮಾಜಿಕ ಒತ್ತಡ ಇರದಿದ್ದುದೇ ಇದಕ್ಕೆ ಕಾರಣ.

ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿರುವ ಕೇರಳದಲ್ಲಿ ಮಕ್ಕಳ ಸಾವಿನ ಪ್ರಮಾಣ ಕಡಿಮೆ ಇರುವುದು ಕಾರಣ. ಅಖಿಲ ಭಾರತ ಅಂಕಿಯ ಪ್ರಕಾರ ಪ್ರತಿ ಸಾವಿರ ಮಕ್ಕಳ ಜನನವಾದಾಗ 96 ಮಕ್ಕಳು ಸತ್ತರೆ, ಕೇರಳದಲ್ಲಿ ಆ ಪ್ರಮಾಣ 27 ಮಾತ್ರ.

ಕೇರಳರಾಜ್ಯದಲ್ಲಿ ಅಕ್ಷರಸ್ಥರ ಸಂಖ್ಯೆ ಅತಿ ಹೆಚ್ಚು. ಭಾರತದ ಉಳಿದ ಯಾವ ರಾಜ್ಯಗಳಿಗೂ ಶಿಕ್ಷಣದಲ್ಲಿ ಕೇರಳವನ್ನು ಹಿಂದೆ ಹಾಕಲು ಸಾಧ್ಯವಾಗಿಲ್ಲ. ಅಖಿಲ ಭಾರತ ಮಹಿಳಾ ಅಕ್ಷರಸ್ಥರ ಪ್ರಮಾಣ, ಒಟ್ಟು ಮಹಿಳಾ ಜನಸಂಖ್ಯೆಯ 24.8% ಆಗಿದ್ದರೆ, ಕೇರಳದಲ್ಲಿ ಅದರ ಪ್ರಮಾಣ 65.7%. ಒಟ್ಟು ಪುರುಷ ಜನಸಂಖ್ಯೆಯ

ಹೆಣ್ಣಿನ ಮೊದಲ ಆದ್ಯತೆ

"ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕೆಂದರೆ ವಿವಾಹ ಇಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು. ಸ್ವಾತಂತ್ರ್ಯವು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿದೆ. ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದೆ ಹಾಗೂ ಸ್ವಯಂ ಗಳಿಕೆಯಲ್ಲಿ ತೊಡಗಿದ್ದರೆ ಅವಳು ಗಂಡ ಅಥವಾ ಇನ್ನಾರ ಮೇಲೋ ಅವಲಂಬಿತಳಾಗಿರಬೇಕಾಗುತ್ತದೆ. ಪರಾವಲಂಬಿಗಳೆಂದಿಗೂ ಸ್ವತಂತ್ರರಲ್ಲ. ಸ್ತ್ರೀ–ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲದಂತಹ ಸ್ವತಂತ್ರ ಹಾಗೂ ಸಂಗಾತಿಯಾಗಿರುವಂತಹುದು," ಹೀಗೆಂದು ಜವಹರಲಾಲ್ ನೆಹರು ಹಿಂದೊಮ್ಮೆ ನುಡಿದಿದ್ದರು.

ಇಂಥ ಒಂದು ತತ್ವದ ಆಧಾರದ ಮೇಲೆ ದುಡಿಯುವ ಮಹಿಳೆಯನ್ನು ಸಮಾಜ ಹಾಗೂ ಸರ್ಕಾರ ಸ್ವೀಕರಿಸಬೇಕು. ಆದರೆ ಹಾಗೆ ಸ್ವೀಕರಿಸಲಾಗುತ್ತಿದೆಯೇ ? ಸಾಂಪ್ರದಾಯಿಕವಾದ ಮಗಳು–ಪತ್ನಿ–ತಾಯಿ ಪಾತ್ರಕ್ಕೆ ನಿಷ್ಠೆ ತೋರಿ, ಆರ್ಥಿಕ ಸ್ವಾತಂತ್ರ್ಯ ಉಳಿಸಿಕೊಂಡು ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಲು ಅವಳು ಹೆಣಗಬೇಕಿದೆ. ಭಾರತೀಯ ಮಹಿಳೆಯ ಬದುಕಿನಲ್ಲಿ ಉದ್ಯೋಗ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಇದು ಬದಲಾಗಬೇಕು.

ಉದ್ಯೋಗವು ಮಹಿಳೆಯ ಸ್ಥಾನಮಾನ ಸುಧಾರಣೆಗೆ ಪ್ರಮುಖವಾಗುತ್ತದೆ. ಅದು ಉತ್ಪಾದಕತೆಯ ಮೇಲೆ ನಿರ್ಣಾಯಕ ಪ್ರಭಾವ ಬೀರುವುದಲ್ಲದೆ, ಮನೆಯ ರೂಪು ರೇಷೆ ಹಾಗೂ ಕುಟುಂಬದಲ್ಲಿನ ಸಂಬಂಧಗಳ ಮೇಲೂ ಗಮನಾರ್ಹ ಪರಿಣಾಮ ಉಂಟುಮಾಡುತ್ತದೆ. ಉದ್ಯೋಗ, ಆರೋಗ್ಯ, ಸಂವಿಧಾನದತ್ತ ಹಕ್ಕುಗಳ ಉಪಯೋಗ, ಸಮಾನತೆ, ಸಮಾನ ಅವಕಾಶ ಇವುಗಳು ಮಹಿಳೆಯಂಗೆ ಲಭ್ಯವಾಗಲು ನಿರಕ್ಷರತೆ ಅಡ್ಡಿಯಾಗಿದೆ. ಮಹಿಳಾ ಸಾಕ್ಷರತೆ ಹಾಗೂ ಶಿಕ್ಷಣ ಮತ್ತು ಉದ್ಯೋಗವು ಕುಟುಂಬದ ಗುಣಮಟ್ಟ ಸುಧಾರಣೆ, ಚಿಕ್ಕ ಕುಟುಂಬ ತತ್ವಕ್ಕೆ ಅಗತ್ಯವಾಗಿವೆ. ಕುಟುಂಬದ ಸಂಖ್ಯೆ ನಿಯಂತ್ರಣದಲ್ಲಿ ಮಹಿಳೆಯರ ಪಾತ್ರ ಸಮರ್ಥವಾಗಲು ಅವರಿಗೆ ಶಿಕ್ಷಣ ಅಗತ್ಯ.

ಮದುವೆ ಮಾರುಕಟ್ಟೆಯಲ್ಲಿ ಅವಳ ಆದಾಯ ಮುಖ್ಯ ಅಂಶವಾಗಿದೆ. ಆದೇ ಸಮಯದಲ್ಲಿ ಅವಳ ಉದ್ಯೋಗವು ಅವಳ ಪತ್ನಿ, ತಾಯಿ ಪಾತ್ರಗಳಿಗೆ ಯಾವ ರೀತಿಯಲ್ಲಿಯೂ ಅಡ್ಡಿ ಉಂಟುಮಾಡಬಾರದು. ಈ ನಿರೀಕ್ಷೆಗಳು ಭಾರತೀಯ ಮಹಿಳೆಯನ್ನು ಹೆಚ್ಚು ಶೋಷಿತೆಯನ್ನಾಗಿಮಾಡಿದೆ. ಒಂದು ಹೊಣೆಯಿಂದ ಮತ್ತೊಂದು ಜವಾಬ್ದಾರಿಯತ್ತ ಸಾಗುವ ಅವಳು ತನ್ನ ಸೌಕರ್ಯದತ್ತ ಗಮನ ಹರಿಸಲು ಸಮಯ ಇಲ್ಲದ ಗೊಂದಲದ ಪರಿಸ್ಥಿತಿ ಅವಳದಾಗಿದೆ.

ಮಹಿಳೆ ಮನೆ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ಮಾಡುವ ದುಡಿಮೆ 'ಅಗೋಚರ' ಹಾಗೂ ಲಾಭದಾಯಕವಲ್ಲದ ದುಡಿಮೆಯಾಗಿ ಅದು ಆರ್ಥಿಕ ಬೆಳವಣಿಗೆಗೆ ಪೂರಕವೆಂಬ ಭಾವನೆಯೇ ಬಂದಿಲ್ಲ. 20 ವರ್ಷದ ಯೋಜನಾ ಅವಧಿಯಲ್ಲಿ ಮಹಿಳಾ ಜನಸಂಖ್ಯೆ ಶೇಕಡ 55 ರಷ್ಟು ಏರಿದೆ. ಆದರೆ ದುಡಿಮೆ ಕ್ಷೇತ್ರದಲ್ಲಿ ಅವರ ಬಲ ಶೇಕಡ 15 ರಷ್ಟು ಮಾತ್ರ ಏರಿದೆ. ಈ ದುಡಿಮೆ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಇಳಿಮುಖಕ್ಕೆ ಕೆಲವು ಕಾರಣಗಳನ್ನು ಗುರುತಿಸಬಹುದು. 1. ಜನ ಸಂಖ್ಯೆ ಏರಿಕೆ ಪ್ರಮಾಣ ಸಮನಾಗಿಲ್ಲ ಅಂದರೆ ಪುರುಷ ಸಂಖ್ಯೆ ಏರಿಕೆಯಷ್ಟೇ ಪ್ರಮಾಣದಲ್ಲಿ ಸ್ತ್ರೀಯರ ಸಂಖ್ಯೆ ಏರುತ್ತಿಲ್ಲ. 2. ಸ್ತ್ರೀ–ಪುರುಷ ಅಕ್ಷರಸ್ಥರ ಪ್ರಮಾಣದ ಅಂತರ ಹೆಚ್ಚುತ್ತಲೇ ಇದೆ.

ಇಂಥ ನಿರಾಶಾದಾಯಕ ಅಂಕಿ ಅಂಶಗಳ ಮಧ್ಯೆಯೂ ಒಂದು ಸ್ವಾಗತಾರ್ಹ ಅಂಶವೆಂದರೆ ಮಹಿಳೆಯರ ದುಡಿಮೆಯ ಕ್ಷೇತ್ರ ವಿಸ್ತಾರಗೊಂಡಿದೆ. ಸಾಮಾಜಿಕ ಚಟುವಟಿಕೆಯ ಹೆಚ್ಚು ಕಮ್ಮಿ ಎಲ್ಲ ರಂಗಗಳಲ್ಲೂ ಅವಳು ದುಡಿಯುತ್ತಿದ್ದಾಳೆ. ಆದರೆ ಮುಖ್ಯ ಪ್ರಶ್ನೆ ಇದು. 'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಭಾರತೀಯ ಸಮಾಜ ಅದನ್ನು ಹೆಣ್ಣಿಗೂ ವಿಸ್ತರಿಸುವ ಕಾಲ ಎಂದು ಬರುವುದು ?

— ಎನ್. ಗಾಯತ್ರಿ

75.3% ಪುರುಷರು ಕೇರಳದಲ್ಲಿ ಅಕ್ಷರಸ್ಥರಿದ್ದಾರೆ. ಎಂದರೆ, ಮಹಿಳೆಯರು ಪುರುಷರಿಗಿಂತ ಬಹಳ ಹಿಂದೇನೂ ಇಲ್ಲ.

1986-87ರಲ್ಲಿ ಕೆಳ ಪ್ರೈಮರಿ ಶಾಲಾಮಟ್ಟದಲ್ಲಿ ಶಾಲೆಗೆ ದಾಖಲಾದ ಹುಡುಗಿಯರು 48.6% ಇದ್ದರೆ, ಪ್ರೈಮರಿ ಶಾಲಾ ಮಟ್ಟದಲ್ಲಿ 48.8% ಮತ್ತು ಹೈಸ್ಕೂಲ್ ಮಟ್ಟದಲ್ಲಿ 49.9% ಇದ್ದರು. ಶಾಲೆಗೆ ದಾಖಲು ಮಾಡುವಾಗ ಕೇರಳದಲ್ಲಿ ತಂದೆ-ತಾಯಿಗಳು ತಮ್ಮ ಗಂಡು-ಹೆಣ್ಣು ಮಕ್ಕಳ ನಡುವ ಯಾವುದೇ ಭೇದ-ಭಾವವನ್ನು ಮಾಡುವುದಿಲ್ಲವೆಂಬುದನ್ನು ಇದು ತೋರಿಸುತ್ತದೆ.

ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಹೆಣ್ಣು ಮಕ್ಕಳಿಗೂ ಸಹ ಕೇರಳದಲ್ಲಿ ದೊರೆಯುತ್ತಿರುವ ಶಿಕ್ಷಣದ ಅವಕಾಶ ಆಶ್ಚರ್ಯ ಉಂಟುಮಾಡುತ್ತದೆ. ಅಖಿಲ ಭಾರತದ ಮಟ್ಟದಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟಿನ ಅಕ್ಷರಸ್ಥ ಹೆಣ್ಣುಮಕ್ಕಳ ಪ್ರಮಾಣ ಕ್ರಮೇಣ 10.9% ಮತ್ತು 8% ಆಗಿದ್ದರೆ, ಕೇರಳದಲ್ಲಿ ಆ ಪ್ರಮಾಣ 49.7% ಮತ್ತು 26% ಇದೆ. ಶಿಕ್ಷಣದ ಮೇಲೆ ಮಾಡುವ ಖರ್ಚು ಅಖಿಲ ಭಾರತ ಅಂಕಿ-ಅಂಶದ ಪ್ರಕಾರ ತಲಾ 119 ಆಗಿದ್ದರೆ, ಕೇರಳದಲ್ಲಿ 1986-87ರಲ್ಲಿ 193 ಆಗಿದೆ.

ಕೇರಳದ ಮಹಿಳೆಯರ ಆಯು ಪ್ರಮಾಣ 62%, ಅಖಿಲ ಭಾರತ ಅಂಕಿ-ಅಂಶದ ಪ್ರಕಾರ ಅದು ಕೇವಲ 54.7%. ಕೇರಳದ ಪುರುಷರ ಆಯು ಪ್ರಮಾಣ ಅಲ್ಲಿಯ ಮಹಿಳೆಯರಿಗಿಂತಾ ಕಡಿಮೆ, ಎಂದರೆ, 60.6%. ಕೇರಳದ ಪುರುಷ-ಮಹಿಳೆಯರ ಆಯುಪ್ರಮಾಣ ಬೇರೆಲ್ಲ ರಾಜ್ಯಗಳಿಗಿಂತ ಹೆಚ್ಚು. ಉತ್ತಮ ವೈದ್ಯಕೀಯ ಸೇವೆಗಳು ಲಭ್ಯವಿರುವುದು. ಕುಟುಂಬ ಯೋಜನೆ ಹೆಚ್ಚು ಯಶಸ್ವಿಯಾಗಿ ಮಕ್ಕಳ ಜನನ ಪ್ರಮಾಣ ಕಡಿಮೆಯಾಗಿರುವುದು ಕೇರಳದ ಮಹಿಳೆಯರ ಆರೋಗ್ಯದ ಗುಟ್ಟು. ಅಲ್ಲಿಯ ಮರಣದ ಪ್ರಮಾಣ (6.6) ವನ್ನು ಅನೇಕ ಮುಂದುವರಿದ ರಾಷ್ಟ್ರಗಳೊಂದಿಗೆ ಹೋಲಿಸಬಹುದಾಗಿದೆ. ಜನನದ ಸಮಯದಲ್ಲಿ ತಾಯಿಂದಿರ ಮರಣದ ಸಂಖ್ಯೆ 1983ರಲ್ಲಿ ಕೇರಳದಲ್ಲಿ 111 ಆಗಿತ್ತು. (ಅದರಲ್ಲಿ 106 ಗ್ರಾಮಾಂತರ ಪ್ರದೇಶದಲ್ಲಿ) ರಾಜ್ಯವು ಉತ್ತಮ ವೈದ್ಯಕೀಯ ಸೇವೆಗಳನ್ನು, ಎಲ್ಲ ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಿರುವುದಲ್ಲದೇ ಹೆಚ್ಚಿನ ಸಂಖ್ಯೆಯ ಮಹಿಳೆಯರು ಶಿಕ್ಷಣ ಪಡೆದಿರುವುದೂ ವೈದ್ಯಕೀಯ ಸೌಲಭ್ಯದ ಸದುಪಯೋಗ ಪಡೆಯಲು ಕಾರಣವಾಗಿದೆ, ಕೇರಳದಲ್ಲಿ ಒಳರೋಗಿಗಳು, ಹೊರರೋಗಿಗಳಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಾಗಿದೆ. ರಾಜ್ಯ ಬಜೆಟನ ಹೆಚ್ಚಿನ ಪಾಲನ್ನು ಶಿಕ್ಷಣ ಮತ್ತು ಆರೋಗ್ಯಕ್ಕೆ ಮೀಸಲಾಗಿಟ್ಟ ಕೇರಳದ ಉದಾಹರಣೆಯನ್ನು ಎಲ್ಲ ರಾಜ್ಯಗಳೂ ಅನುಸರಿಸಿದಲ್ಲಿ ಮಹಿಳೆಯರ ಪ್ರಗತಿ ಸುಲಭ ಸಾಧ್ಯವಾಗುತ್ತದೆ.

ಕೇರಳದ ಹೆಚ್ಚಿನ ಮಹಿಳೆಯರು ತೊಡಗಿರುವ ಉದ್ಯೋಗಗಳೆಂದರೆ ವ್ಯವಸಾಯ (43.6%), ನಾರಿನ ಉದ್ದಿಮೆ (84.24%), ಗೋಡಂಬಿ ಉದ್ದಿಮೆ (65.90%), ಮತ್ತು ಮೀನುಗಾರಿಕೆ (ಮೀನು ಮಾರಾಟ ಸಂಪೂರ್ಣ ಅವರದೇ ಜವಾಬ್ದಾರಿ). ಈ ಉದ್ದಿಮೆಗಳಲ್ಲಿ ಹೆಚ್ಚುವೇಳೆ ಪೈ ಪೋಟಿಯಲ್ಲಿ ದುಡಿಯುವ ಕೇರಳದ ಮಹಿಳೆಗೆ ಪ್ರತಿಫಲವಾಗಿ ಸಿಗುವುದು ತಾರತಮ್ಯದ ಪ್ರತಿಫಲ. ಬತ್ತದ ಗದ್ದೆಯಲ್ಲಿ ಕೆಲಸ ಮಾಡುವ ಪುರುಷನಿಗೆ ಸರಾಸರಿ ಪ್ರತಿಫಲ 30.36 ಸಿಕ್ಕರೆ, ಅದೇ ಕೆಲಸಕ್ಕೆ ಮಹಿಳೆಗೆ ಸಿಗುವ ಪ್ರತಿಫಲ 17.68. ವಿಶ್ವಮಾರುಕಟ್ಟೆಯಲ್ಲಿ ನಾರಿಗೆ ಬೇಡಿಕೆ ಕಡಿಮೆಯಾಗುತ್ತಿರುವುದರಿಂದ ಆ ಉದ್ದಿಮೆಯು ಕುಸಿದು, ಮಹಿಳಾ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಅದೇ ರೀತಿ, ಆಧುನಿಕ ಯಂತ್ರೋಪಕರಣಗಳು ಬಂದಲ್ಲೆಲ್ಲ ಮಹಿಳಾ ಉದ್ಯೋಗಿಗಳು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಿದ್ದಾರೆ. ಆಧುನಿಕ ಯಂತ್ರೋಪಕರಣಗಳನ್ನು, ತಂತ್ರಜ್ಞಾನವನ್ನು ತಂದಾಗ ಪುರುಷನಿಗೆ ಮಾತ್ರ ತರಬೇತಿ ನೀಡಿ, ಮಹಿಳೆಯರನ್ನು ತರಬೇತಿಗೆ ಯೋಗ್ಯರಲ್ಲವೆಂದು ಭಾವಿಸುವುದು ಇದಕ್ಕೆ ಕಾರಣ.

ಕೇರಳದಲ್ಲಿ, ಈ ಮೇಲಿನ ಕೆಲವನ್ನು ಬಿಟ್ಟು, ಬೇರೆ ಯಾವುದೇ ಉದ್ದಿಮೆ ಇಲ್ಲದಿರುವುದರಿಂದ ಭಾರತದಲ್ಲಿಯೇ ಅತಿ ಹೆಚ್ಚಿನ ನಿರುದ್ಯೋಗ ಸಮಸ್ಯೆ ಅಲ್ಲದೆ-ಮಹಿಳೆಯರಿಗೂ ಅದರ ಬಿಸಿ ತಾಗಿದೆ. ಪುರುಷ ನಿರುದ್ಯೋಗಿಗಳ ಪ್ರಮಾಣ 17.8% ಇದ್ದರೆ, ಮಹಿಳಾ ನಿರುದ್ಯೋಗಿಗಳ ಪ್ರಮಾಣ43.6%ರಷ್ಟು ಅತಿ ಹೆಚ್ಚು ಇದೆ. ಅದೇ ರೀತಿ

ತಮ್ಮ ವಿದ್ಯಾರ್ಹತೆಗೆ ತಕ್ಕದ್ದಲ್ಲದ ಉದ್ಯೋಗ ಮಾಡುತ್ತಿರುವ ಮಹಿಳೆಯರ ಸಂಖ್ಯೆಯೂ ಹೆಚ್ಚಿದೆ. ಕೇರಳದ ನಿರುದ್ಯೋಗಿ ವಿದ್ಯಾವಂತ ಮಹಿಳೆಯರು ಭಾರತದ ಬೇರೆ–ಬೇರೆ ರಾಜ್ಯಗಳಲ್ಲದೇ ವಿದೇಶಗಳಿಗೂ ಉದ್ಯೋಗಗಳನ್ನು ಅರಸಿ ಹೋಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಉದಾಹರಣೆಗೆ. ಕೇರಳದ ಮಹಿಳಾ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳಲ್ಲಿ 83% ಮತ್ತು ಮಹಿಳಾ ಕೆಮಿಕಲ್ ಇಂಜಿನಿಯರ್‌ಗಳಲ್ಲಿ 100% ನಿರುದ್ಯೋಗಿಗಳು! ಆದರಿಂದಾಗಿಯೇ ಕೇರಳ ಸರ್ಕಾರ ಸ್ವಂತ ಉದ್ದಿಮೆಗೆ ಪ್ರೋತ್ಸಾಹ ಕೊಡಲು ಆರಂಭಿಸಿದ್ದು, ಮಹಿಳಾ ಸ್ವಂತ ಉದ್ದಿಮೆ ಘಟಕಗಳು 1975–76 ರಲ್ಲಿ 73 ಇದ್ದು 1989ರಲ್ಲಿ ಅದು 1633ಕ್ಕೆ ಏರಿರುವುದು ಒಂದು ಶುಭ ಸೂಚನೆ.

ಇಷ್ಟೆಲ್ಲ ಮಹಿಳೆಯರಿಗೆ ಅನುಕೂಲಕರ ಪರಿಸ್ಥಿತಿ ಇರುವ ಕೇರಳದಲ್ಲಿ ಮಹಿಳೆಯರ ಸ್ಥಾನಮಾನ ಚೆನ್ನಾಗಿರಲೇಬೇಕು ಎಂದು ಭಾವಿಸಿದವರಿಗೆ ನಿರಾಶೆಯೊಂದಿಗೆ ಆಶ್ಚರ್ಯವೂ ಆಗುತ್ತದೆ. ಕೇರಳದಲ್ಲಿಯೂ ಮಹಿಳೆಯರಿಗೆ ಯಾವುದೇ ಜವಾಬ್ದಾರಿಯುತ ಅಧಿಕಾರ ಸ್ಥಾನಗಳನ್ನು ನೀಡಿಲ್ಲವೆಂದರೆ ಅದಕ್ಕೆ ಕಾರಣಗಳನ್ನು ಹುಡುಕಬೇಕಾಗುತ್ತದೆ. ರಾಜಕೀಯ ಕ್ಷೇತ್ರದಲ್ಲಿಯೂ ಮಹಿಳೆಯರಿಗೆ ಹೆಚ್ಚಿನ ಪಾತ್ರವನ್ನು ನೀಡಲಾಗಿಲ್ಲ. ಪಾರ್ಲಿಮೆಂಟಿನಲ್ಲಾಗಲೀ, ಅಸೆಂಬ್ಲಿಯಲ್ಲಾಗಲೀ, ಮಂತ್ರಿಮಂಡಲದಲ್ಲಾಗಲೀ, ಮಹಿಳೆಯರಿಗೆ ಸಿಕ್ಕಿರುವ ಪ್ರಾತಿನಿಧ್ಯತೆ ಅತ್ಯಲ್ಪ. ಬಹುಶಃ ಉಳಿದ ಕಡೆ ಇರುವಂತೆ ಕಣ್ಣೊರೆಸುವ ಪ್ರಾತಿನಿಧ್ಯತೆ. ನಾರು ಗೋಡಂಬಿಇತ್ಯಾದಿ ಉದ್ದಿಮೆಗಳಲ್ಲಿ ಮಹಿಳೆಯರು ಜಾಸ್ತಿ ಇದ್ದರೂ ಕಾರ್ಮಿಕ ಸಂಘಗಳಲ್ಲಿ ಅವರಿಗೆ ಯಾವುದೇ ಅಧಿಕಾರದ ಸ್ಥಾನ ಇಲ್ಲ. ಭಾರತದ ಇತರ ಮಹಿಳೆಯರಿಗೆ ಹೋಲಿಸಿದಾಗ ಗುಣಾತ್ಮಕವಾಗಿ ಯಾವುದೇ ಹೆಚ್ಚಿನ ಬದಲಾವಣೆ ಕಂಡುಬರುವುದಿಲ್ಲ. ವಿದ್ಯಾವಂತೆಯಾಗಿ, ದುಡಿಮೆ ಗಳಿಸುತ್ತಿದ್ದರೂ ಇಂದಿಗೂ ಆಕೆ ಪರಾವಲಂಬಿ ಎಂದೇ ಪರಿಗಣಿಸಲ್ಪಡುತ್ತಾಳೆ. ತನ್ನ ಗಳಿಕೆಯ ಮೇಲೂ ಅವಳಿಗೆ ಅಧಿಕಾರವಿರುವುದಿಲ್ಲ. ಅವಳ ಗಳಿಕೆ ಏನಿದ್ದರೂ ಪುರುಷನ ಗಳಿಕೆಗೆ ಪೂರಕವಾಗಿಯೇ ಇರುತ್ತದೆ. ಗೃಹಕೃತ್ಯ, ಮಕ್ಕಳ ಪೋಷಣೆಯೇ ಅವಳ ಮುಖ್ಯ ಕರ್ತವ್ಯ. ತಾಯಿ–ಹೆಂಡತಿಯಾಗಿ ಮಾತ್ರ ಅವಳಿಗೆ ಮಹತ್ವ. ಇಷ್ಟು ಸಾಲದೆಂಬಂತೆ ಆಡಂಬರದ ಮದುವೆಗಳು, ವರದಕ್ಷಿಣೆ ಕೇರಳ ಸಮಾಜದಲ್ಲಿ ತಲೆಹಾಕಿ ಅಲ್ಲಿಂದ ಮಹಿಳೆಯರ ಸ್ಥಾನ–ಮಾನವನ್ನು ಕುಸಿಯುವಂತೆ ಮಾಡಿದೆ. ವಿದ್ಯಾಭ್ಯಾಸ ಉದ್ಯೋಗವೂ ಕೂಡ ಹೆಣ್ಣಿನ ಸ್ಥಾನಮಾನ ಸುಧಾರಣೆಗೆ ಇರದೇ ಮದುವೆಯ ಮಾರುಕಟ್ಟೆಯಲ್ಲಿ ಸುಲಭವಾಗಿ ಖರ್ಚಾಗಲು ಸಾಧನವೆಂದು ಪರಿಗಣಿತವಾಗಿದೆ.

ಶಿಕ್ಷಣ, ಉದ್ಯೋಗ, ಆಯು ಪ್ರಮಾಣ, ಆರೋಗ್ಯವೆಲ್ಲ ಇದ್ದರೂ ಧೋರಣೆಗಳಲ್ಲಿ ಬದಲಾವಣೆ ಆಗದಿದ್ದಲ್ಲಿ, ಆಗುವಂತೆ ಮಾಡದಿದ್ದಲ್ಲಿ ಮಹಿಳೆಯರ ಪ್ರಗತಿ ಸಾಧ್ಯವಿಲ್ಲವೆಂಬುದನ್ನು ಕೇರಳ ತೋರಿಸಿದೆ.

ಫಣಿಯಮ್ಮ — ಒಂದು ವಿವೇಚನೆ

○ ಡಾ|| ಬಿ. ಎನ್. ಸುಮಿತ್ರಾಬಾಯಿ

ಜೀವನದ ಅನುಭವವು ಮಾಗುವ ವಯಸ್ಸಿನಲ್ಲಿ ಎಂ. ಕೆ. ಇಂದಿರಾ ತಮ್ಮ ಮೊದಲ ಕಾದಂಬರಿಯನ್ನು ಪ್ರಕಟಿಸಿದರು. (ತುಂಗಭದ್ರ : ೧೯೬೩). ಅಲ್ಲಿಂದ ಕಾಲು ಶತಮಾನದ ಅವಧಿಯಲ್ಲಿ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಹಲವು ಕಾದಂಬರಿಗಳು ಎಂಟು – ಒಂಭತ್ತು ಬಾರಿ ಮುದ್ರಣ ಕಂಡಿವೆ. ಸಾಹಿತ್ಯೇತಿಹಾಸವು ಕಾದಂಬರಿ ಲೇಖಕಿಯರಲ್ಲಿ ಬಹು ಮುಖ್ಯರಾದವರ ಸಾಲಿನಲ್ಲಿ ಇವರ ಹೆಸರನ್ನು ಉಲ್ಲೇಖಿಸುತ್ತ ಬಂದಿದೆ. ಬಹು ಬೇಡಿಕೆಯುಳ್ಳ, ಜನಮನ್ನಣೆಗಳಿಸಿದ ಇಂಥ ಲೇಖಕಿಯ ಕೃತಿಗಳನ್ನು ವಿಮರ್ಶಾಲೋಕವು ಇತರ ಲೇಖಕಿಯರ ಸಾಹಿತ್ಯವನ್ನು ಕಾಣುವಂತೆ ಉದಾಸೀನತೆಯಿಂದಲೇ ನೋಡುತ್ತಾ ಬಂದಿದೆ.

ಇಂದಿರಾ ಕಾದಂಬರಿ ಬರೆಯ ತೊಡಗಿದ ಕಾಲಕ್ಕೆ ಕನ್ನಡ ಕಾದಂಬರಿಯು ಆರು ದಶಕಗಳ ಸಮೃದ್ಧ ಇತಿಹಾಸವನ್ನು ಕಂಡಿತ್ತೆಂಬುದನ್ನು ನೆನೆಯಬೇಕು. ನವೋದಯಪೂರ್ವ, ನವೋದಯ, ಪ್ರಗತಿಶೀಲ ಮತ್ತು ನವ್ಯ ಆಂದೋಲನಗಳ ಪರಿಣಾಮವಾಗಿ – ಅವುಗಳ ಒಂದು ಅಂಗವಾಗಿಯೂ ಮಹಿಳಾ ಸಾಹಿತ್ಯ ಬೆಳೆದು ಬಂದಿತು. ಮೊದಲ ಕಾದಂಬರಿಕಾರರು ರಚಿಸಿದ 'ಇಂದಿರಾಬಾಯಿ', 'ಇಂದಿರೆ', 'ವಾಗ್ದೇವಿ' – ಮುಂತಾದ ಕೃತಿಗಳಲ್ಲಿ ಸ್ತ್ರೀ ಸಮಸ್ಯೆಗಳನ್ನು ಮಾಧ್ಯಮವಾಗಿ ಮಾಡಿಕೊಂಡು ಸಮಕಾಲೀನ ಸಮಾಜದ ಧಾರ್ಮಿಕ ಕುರುಡು ನಂಬಿಕೆಗಳನ್ನು ಅನಾಚಾರಗಳನ್ನು ವಿಡಂಬಿಸಿ, ವಿಮರ್ಶಿಸುವ ಯತ್ನವು ವಿಶೇಷವಾಗಿತ್ತು. ಸಾಮಾಜಿಕ ವಾತಾವರಣದಲ್ಲಿ ಹಬ್ಬಿದ್ದ ಈ ಸುಧಾರಣೆಯ ಗಾಳಿಯು ಪ್ರಾರಂಭದ ಕಾದಂಬರಿಕಾರರ ರಚನೆಗಳಿಗೆ ಒಂದು ವಿಶಿಷ್ಟ ಸ್ತ್ರೀಪರ ಆಯಾಮವನ್ನು ಒದಗಿಸಿದಂತೆ ತೋರುತ್ತದೆ.

ಪ್ರಗತಿಶೀಲ ಆಂದೋಲನದ ಎರಡು ಕವಲುಗಳಲ್ಲಿ ಅದೇಕೋ ನಿರಂಜನರ ಪಂಥದ ಶುದ್ಧ ಸ್ತ್ರೀ ಪರವಾದ ಚಿಂತನೆಗಿಂತಲೂ ಅ. ನ. ಕೃ ಮತ್ತು ಅವರ ಅನುಯಾಯಿಗಳ ಪ್ರಭಾವವು ನಮ್ಮ ಬಹುಪಾಲು ಲೇಖಕಿಯರ ಮೇಲಾದಂತೆ ತೋರುತ್ತದೆ. ಈ ಅವಧಿಯವರೇ ಆದ ಎಂ. ಕೆ. ಇಂದಿರಾ ತ್ರಿವೇಣಿಯವರಂತೆ ಸುಶಿಕ್ಷಿತ ಮನಸ್ಸಿನ ಸ್ತ್ರೀಪರವಾದ ಚಿಂತನೆಗಳ ಕೇಂದ್ರದಿಂದ ಕೃತಿ ರಚನೆಗೆ ತೊಡಗಿದವರಲ್ಲ. ಅನುಪಮಾರವರಂತೆ ಸೈದ್ಧಾಂತಿಕ ನಿಲುವೂ ಅವರ ಬೆನ್ನೆಲುಬಲ್ಲ. ನೀಳಾದೇವಿ, ಹೆಚ್. ಎಸ್ ಪಾರ್ವತಿಯವರಂತೆ ಶಿಕ್ಷಣದ ಮೂಲಕ ಹೆಚ್ಚಿದ ವಿಚಾರ, ಸಾಹಿತ್ಯ ಚಿಂತನೆಗಳ ಫಲವಾದ ಸ್ತ್ರೀಪರವಾದ ಚಿಂತನೆಯೂ ಅವರ ಮೇಲೆ ಪ್ರಭಾವ ಬೀರಿಲ್ಲ. ಈಗಾಗಲೇ ಅನೇಕರು ಹೇಳುವಂತೆ ಜೀವನದ ಸ್ವಂತ ಅನುಭವದ ರಾಶಿಯೇ ಅವರ ಬರಹಗಳ ಮೂಲದ್ರವ್ಯವಾಗಿದೆ. ಆದರೆ ಇಂದಿರಾ ಅವರ ಕಾದಂಬರಿಗಳ ಮುಖ್ಯ ಆಧಾರವಾಗಿರುವ ಈ ಅನುಭವದ ಸಂಪತ್ತು ಅವರ ಕೃತಿಗಳ ಸ್ವರೂಪ – ಚಿಂತನೆಯ ವ್ಯಾಪ್ತಿಗಳನ್ನು ಹೇಗೆ ನಿರ್ದೇಶಿಸುತ್ತದೆ ? ತಮ್ಮ ಹಿಂದಿನ ಲೇಖಕಿಯರ ಪರಂಪರೆಗೆ ಇಂದಿರಾ ಸಲ್ಲುತ್ತಾರೆಯೇ ? ಇಲ್ಲವೇ ? ಎಂಬುದು ಇಲ್ಲಿ ಮುಖ್ಯವಾಗಿದೆ.

ಇಂದಿರಾ ಅವರ ಜನಪ್ರಿಯತೆಯ ಪ್ರತೀಕಗಳಾಗಿರುವ ಮತ್ತು ನಿಜವಾಗಿ ಸತ್ವಪೂರ್ಣವೆಂದು ಕೆಲವು ವಿಮರ್ಶಕ, ವಿಮರ್ಶಕಿಯರು ಗುರುತಿಸಿರುವ 'ತುಂಗಭದ್ರ' 'ಸದಾನಂದ' 'ಚಿದ್ವಿಲಾಸ' 'ಗೆಜ್ಜೆ ಪೂಜೆ' ಮತ್ತು 'ಫಣಿಯಮ್ಮ' — ಈ ಐದು ಕಾದಂಬರಿಗಳನ್ನು ಅಭ್ಯಸಿಸಿದಾಗ ಕೆಲವು ವೈಶಿಷ್ಟ್ಯಗಳನ್ನು – ಈ ಐದರಲ್ಲೂ ಮತ್ತೆ ಮತ್ತೆ ಕಾಣುವಂಥದನ್ನು ಹೀಗೆ ಗುರುತಿಸಬಹುದು.

(1) ಜೊತೆಯ ಲೇಖಕಿಯರು ಮುಖ್ಯವಾಗಿ ನಗರದ ಮಧ್ಯಮ ಮತ್ತು ಕೆಳವರ್ಗದ ಜನರ ಬದುಕಿನ ಸಮಸ್ಯೆಗಳನ್ನು ಕುರಿತು ಬರೆಯುತ್ತಿದ್ದಾಗ ಇಂದಿರಾ ಅವರಿಗಿಂತ ತುಂಬ ಭಿನ್ನವಾಗಿ ಮಲೆನಾಡಿನ ಗ್ರಾಮೀಣ

ಜನರ ಜೀವನ ಸತ್ವ, ಸಂಸ್ಕೃತಿಗಳನ್ನು ಕುರಿತು ಬರೆಯ ತೊಡಗಿದರು.

(೨) ಹಳ್ಳಿಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳಲ್ಲಿ ಶ್ರದ್ಧೆಯುಳ್ಳ, ಸರಳ ಸುಂದರವಾದ ಸಂಘಟಿತ ಬದುಕುಗಳು, ಹೊರಗಿನ ನಾಗರೀಕತೆಯ ಸಂಪರ್ಕದಿಂದ ಆ ಬದುಕುಗಳಲ್ಲಿ ಆಗುವ ಏರುಪೇರುಗಳು, ಮರಣ, ಪ್ರವಾಹ ಬೇನೆ- ಮೊದಲಾದ ನೈಸರ್ಗಿಕ ತೊಂದರೆಗಳಿಂದ ಒದಗುವ ಏರಿಳಿತಗಳು ಇಂದಿರಾ ಅವರ ಎಲ್ಲಾ ಯಶಸ್ವೀ ಕೃತಿಗಳಲ್ಲಿ ಒಂದಲ್ಲ ಒಂದು ರೀತಿ ಇದ್ದೇ ಇರುತ್ತದೆ.

(೩) ಮಲೆನಾಡಿನ ದಟ್ಟ ಹಸಿರಿನ ಪ್ರಾಕೃತಿಕ ಸಂಪತ್ತು, ಬೆಟ್ಟ, ಹೊಳೆ, ಕಾಡು ಬಂಡೆಗಳಿಂದ ನಿಬಿಡವಾದ ಗ್ರಾಮ ಜೀವನದ ದಟ್ಟ ಅನುಭವಗಳು ಈ ಲೇಖಕಿಯ ದೀರ್ಘಕಾಲದ ನಗರವಾಸದಿಂದ ಕಿಂಚಿತ್ತೂ ಬದಲಾಗದೆ, ಮಸುಕಾಗದೆ ಕೃತಿಗಳಲ್ಲಿ ಬಿಂಬಿತವಾಗಿದೆ. ಆ ಜನರ ಬದುಕನ್ನು, ಸಂಸ್ಕೃತಿಯನ್ನು, ಅವರದೇ ಆಡು ಭಾಷೆಯ ಸೊಗಡಿನೊಂದಿಗೆ ನೇರವೂ ಸರಳವೂ ಆದ ರೀತಿಯಲ್ಲಿ ನಿರೂಪಿಸುವುದರಿಂದ ಇವರ ಕೃತಿಗಳಿಗೆ ಒಂದು ವಿಧವಾದ ಪ್ರಾದೇಶಿಕತೆಯ ಬಣ್ಣವಿದೆ.

(೪) ಮಾನವತಾವಾದ, ಸಮತಾವಾದ, ವಿಚಾರವಾದಗಳ ತಾತ್ವಿಕ ನಿಲುವುಗಳು, ಜಿಜ್ಞಾಸೆಗಳೂ ಸಾಹಿತ್ಯ ಲೋಕವನ್ನು ಆಳುತ್ತಿದ್ದ ಅವಧಿಯಲ್ಲಿ, ಹಿಂದಿನ ಕಾಲದ ನಾಲ್ಕನೆಯ ಫಾರಂನವರೆಗಿನ ಶಿಕ್ಷಣವನ್ನು ಮಾತ್ರ ಪಡೆದ ಇಂದಿರಾ ತಮ್ಮ ಅನುಭವವೊಂದನ್ನೇ ಸಾಮಗ್ರಿಯಾಗಿಟ್ಟುಕೊಂಡು ಪರಂಪರಾಗತ ಮೌಲ್ಯಗಳಲ್ಲಿ ಇರುವ ಸಾಹಿತ್ಯಿಕ ಅಂಶಗಳನ್ನು, ಬದುಕಿನ ಜೀವಂತಿಕೆಯನ್ನು ಕುರಿತು ಬರೆದರು.

(೫) ಹಳೆಯದರಲ್ಲಿನ ಒಳ್ಳೆಯ ಅಂಶಗಳನ್ನು, ಎಲ್ಲರಿಗೂ ಸುಖದ ಹಕ್ಕಿದೆಯೆಂಬ ಸರಳ ಉದಾರ ಧೋರಣೆಯನ್ನು ಬಿಂಬಿಸುವ ಇಂದಿರಾ ಕೃತಿಗಳು ಮೂಲತಃ ಬದುಕನ್ನು ಇರುವಂತೆಯೇ ಚಿತ್ರಿಸುವ ಯತ್ನಗಳಾಗಿರುವುದರಿಂದ ಬದಲಾವಣೆಗಳು ಹೊರಗಿನಿಂದ ಹೇರಿಕೊಂಡು ಬರುವಾಗ ನೆಲೆ ನಿಂತ ಬದುಕುಗಳ ಜನರ ತಳಮಳ, ತಪ್ತತೆ, ಕೊನೆಗೆ ಅನಿವಾರ್ಯವಾಗಿ ಒಗ್ಗಿಕೊಳ್ಳುವ ಪ್ರಕ್ರಿಯೆಯನ್ನು ಇಲ್ಲಿ ಕಾಣಬಹುದಾದರೂ ಬದಲಾವಣೆಯ ಕ್ರಿಯೆಯಲ್ಲಿ ತೊಡಗಿದ ಜನರ ನಿಜವಾದ ಸತ್ವಗ್ರಹಿಕೆ ಇಲ್ಲಿ ಸ್ಫುಟವಾಗುವುದಿಲ್ಲ.

(6) ನಾಗರಿಕ ಬದುಕಿನ ಸಮಸ್ಯೆಗಳ ದಾರುಣತೆಯನ್ನು ವ್ಯಕ್ತಿಗಳು ಎದುರಿಸಬೇಕಾದ ಸಮಯದಲ್ಲಿ ಗ್ರಾಮೀಣ ಬದುಕಿನ ತಂಪಿನ ಲೋಕವೊಂದನ್ನು ಪ್ರತಿಪಾದಿಸಿ, ಎತ್ತಿ ಹಿಡಿಯುವುದೂ ಈ ಕೃತಿಗಳಲ್ಲಿ ಕಂಡು ಬರುವುದರಿಂದ ಈ ಪಲಾಯನವನ್ನು ಇವರು ಪರಿಹಾರವೆಂದು ಸೂಚಿಸುತ್ತಾರೇನೋ ಎಂದು ತೋರುತ್ತದೆ.

ಈ ಮೇಲಿನ ಎಲ್ಲ ಗುಣಲಕ್ಷಣಗಳು ಹೆಚ್ಚು ಸಾಂದ್ರವಾಗಿ ಕಾಣಿಸಿಕೊಂಡಿರುವ ಇಂದಿರಾ ಅವರ 'ಫಣಿಯಮ್ಮ' ಕೃತಿಯನ್ನು ಈಗ ಚರ್ಚಿಸಬಹುದು. ಒಂದು ವ್ಯಕ್ತಿಯ ಜೀವನ ಚರಿತ್ರೆಯ ಜೊತೆಯಲ್ಲಿ ಒಂದು ಸಮಾಜದ ಸ್ಥಿತ್ಯಂತರವನ್ನೂ ಚಿತ್ರಿಸುವ ಮಹತ್ವಾಕಾಂಕ್ಷೆಯು ಈ ಕೃತಿಯ ಆಶಯವಾಗಿದೆ. ಬದುಕಿಡೀ ಇತರರ ಸೇವೆಗಾಗಿ ಮುಡುಪಿಟ್ಟ ಬಾಲವಿಧವೆ ಫಣಿಯಮ್ಮನ ಉದಾರ ಮನೋಧರ್ಮ, ವಿಚಾರ ಪರತೆ ಮತ್ತು ಮಾನವೀಯ ಅನುಕಂಪ ತುಂಬಿದ ವ್ಯಕ್ತಿತ್ವವನ್ನು ಕೇಂದ್ರವಾಗಿ ಹೊಂದಿರುವ ಈ ಕೃತಿ ಈ ಹಿಂದೆ ಪ್ರಸ್ತಾಪಿಸಿದ ಮಲೆನಾಡಿನ ದಟ್ಟವಾದ ಪ್ರಾಕೃತಿಕ ಆವರಣದಲ್ಲಿ ನೆಲೆಸಿದ ಗ್ರಾಮೀಣ ಬ್ರಾಹ್ಮಣ ಮನೆತನವೊಂದರ ಸಾಂಪ್ರದಾಯಿಕ ಬದುಕಿನ ದಟ್ಟವಾದ ಚಿತ್ರಣವನ್ನೂ ನೀಡುತ್ತದೆ. ಜನರ ಅಜ್ಞಾನ, ಕುರುಡು ನಂಬಿಕೆ, ಮಠಾಧಿಪತಿಗಳ ಧರ್ಮಾಂಧತೆಯಲ್ಲಿರುವ ಕಾರ್ಯ, ಸ್ವಾರ್ಥಗಳನ್ನು ವಿಡಂಬಿಸುತ್ತಾ ಪುರಾಣಗಳ ಕಥನ ತಂತ್ರದ ಮೂಲಕ ಇಂದಿರಾ ಕೃತಿಯನ್ನು ಪ್ರಾರಂಭಿಸುತ್ತಾರೆ. ಫಣಿಯಮ್ಮನ ಬದುಕು ಸಾಮಾನ್ಯಾತಿಸಾಮಾನ್ಯ. ಆದರೆ ಆಕೆಯ ವ್ಯಕ್ತಿತ್ವ ಹಿರಿದಾದ್ದು. ಆದ್ದರಿಂದ ಅದರ ಬಗ್ಗೆ ಬರೆಯಬೇಕಾದ್ದು ಅಗತ್ಯವೆನಿಸಿತೆಂದು ಹೇಳುವುದಲ್ಲದೇ ಫಣಿಯಮ್ಮ – ಲೇಖಕಿಯರ ನಡುವಿನ ಸಂಬಂಧ ಕೂಡ ಕೃತಿಯ ಕೊನೆಯಲ್ಲಿ ವಾಚ್ಯವಾಗಿ ಹೇಳಲ್ಪಟ್ಟಿದೆ.

ಫಣಿಯಮ್ಮನ ವ್ಯಕ್ತಿತ್ವ ಮೊದಲೇ "ಆದರ್ಶಪೂರ್ಣ"ವಾಗಿದೆ. ಕೃತಿ ಅದರ ನಿರೂಪಣೆ ಮಾತ್ರ ಆಗಿದೆ. ಈ ಅಂಶವನ್ನು ಕೃತಿಯ ನಿರೂಪಣಾ ತಂತ್ರದ ವಿಶ್ಲೇಷಣೆಯಿಂದ ಸ್ಪಷ್ಟಪಡಿಸಬಹುದಾಗಿದೆ. ಸಾಮಾಜಿಕ ವಾತಾವರಣದಲ್ಲಿನ ಅವೈಚಾರಿಕ ಸಂಗತಿಗಳನ್ನು ಹಾಸ್ಯಲೇಪಿತ ವಿಡಂಬನೆಯ ಧ್ವನಿಯಲ್ಲಿ ಲೇಖಕಿ ಚಿತ್ರಿಸುತ್ತಾರೆ. ಉದಾ : ಆಷಾಢದ ನಡುರಾತ್ರಿಯಲ್ಲಿ ಫಣಿಯಮ್ಮ ಹುಟ್ಟಿದಾಗ ಮುದುಕ ಯಂಕಪ್ಪಯ್ಯ ಗಳಿಗೆ ಕಂಡು,

ಮುಹೂರ್ತ ಅಳೆದು ಜಾತಕ ಬರೆದು ಜಾತಕ ಫಲ ಹೇಳಿದ ಸಂದರ್ಭಗಳೆಲ್ಲ ಫಣಿಯಮ್ಮನ ವೈಧವ್ಯದ ದುರಂತದೆದುರು ಹೇಗೆ ವಿಡಂಬನೆಯಾಗುತ್ತದೆ ಎಂಬುದನ್ನು ಲೇಖಕಿ ಸಮರ್ಥವಾಗಿ ಚಿತ್ರಿಸುತ್ತಾರೆ. ಆದರೆ 'ಫಣಿಯಮ್ಮ' ಇದೇ ವ್ಯವಸ್ಥೆಯಲ್ಲಿ ಹುಟ್ಟಿ ಬೆಳೆದ, ಇದರದೇ ಸಿದ್ಧ ರೂಪವಾದ ಹಲವು ಸಂಸ್ಕಾರಗಳನ್ನು ಬದುಕಿಡೀ ತೋರ್ಪಡಿಸುವುದರ ಬಗ್ಗೆ ಮಾತ್ರ ಈ ವಿಮರ್ಶಾ ಪ್ರಜ್ಞೆ ಕೆಲಸಮಾಡದೆ, ಆರಾಧನೆ, ಶ್ರದ್ಧೆಗಳಿಂದ ಅವುಗಳನ್ನು ನಿರೂಪಿಸುವುದನ್ನು ಕಾಣುತ್ತೇವೆ. ಇದರಿಂದ ವಾತಾವರಣದ ವಿಮರ್ಶಿತ ಪ್ರತಿಪಾದನೆಯ ಮೂಲಕ ಫಣಿಯಮ್ಮ ಅದಕ್ಕಿಂತ ಪ್ರತ್ಯೇಕವಾದವರು ಎಂಬುದು ಅಷ್ಟು ಸಮರ್ಥವಾಗಿ ಚಿತ್ರಿತವಾಗುವುದಿಲ್ಲ. ಈ ಕೊರತೆಯನ್ನು ಬೇರೊಂದು ರೀತಿಯಲ್ಲಿ ತುಂಬಿಸುವ ಯತ್ನ ಕೃತಿಯಲ್ಲಿದೆ. ಅದೆಂದರೆ ಮಡಿ, ಮೈಲಿಗೆ, ಮುಟ್ಟು, ಲೈಂಗಿಕ ಸಂಬಂಧ ಮೊದಲಾದುವುಗಳ ವಿಷಯದಲ್ಲಿ ಸಂಪ್ರದಾಯಸ್ಥರು ಹೇರುವ ವಿಚಾರಗಳನ್ನು ಫಣಿಯಮ್ಮ ತಮ್ಮ ಮನೋಲೋಕದಲ್ಲಿ ಚಿಂತಿಸಿ, ಅವುಗಳ ಸರಿ–ತಪ್ಪುಗಳನ್ನು ವಿವೇಚಿಸುವ ಸಾಮರ್ಥ್ಯ ಹೊಂದಿದ್ದರು, ಎಂಬುದನ್ನು ನಿರೂಪಣೆಯಲ್ಲಿ ನಡುನಡುವೆ ಸೇರಿಸಿರುವ ಫಣಿಯಮ್ಮನ ಚಿಂತನೆಗಳಿಂದ ಮನದಟ್ಟು ಮಾಡಿಸಲು ಯತ್ನಿಸುತ್ತಾರೆ.

"ಆದರೂ ಕೆಲಸಮಾಡುವಾಗಲೆಲ್ಲ ಅವರ ತಲೆ ಈ ಸೃಷ್ಟಿ ರಹಸ್ಯದ ಬಗ್ಗೆ ಯೋಚಿಸುತ್ತಿತ್ತು. ಕಾಶಿಯಾತ್ರೆಯ ವಿನಾ ಮತ್ತೆ ಹೊರ ಪ್ರಪಂಚದ ಸಂಪರ್ಕವಿಲ್ಲದೆ ಅವರಿಗೆ ಮನೆಯ ಹಿರಿಯರು ಕಡ್ಡಾಯವಾಗಿ ಮಾಡಿಟ್ಟ ಸಂಪ್ರದಾಯಗಳ ಬಗೆಗೆ ಅರ್ಥವೇ ಆಗುತ್ತಿರಲಿಲ್ಲ........ನಮ್ಮದೇ ಗರ್ಭದೊಳಗಿನದೇ ರಕ್ತ ಹೊರ ಬಂದಾಗ ಅದು ಹೆಂಗಸಿನ ಪಾಲಿಗೆ ಮೈಲಿಗೆ. ಮೂರುದಿನ ಹೊರಗೆ ಕೂತಿರಬೇಕು. ನಾಲ್ಕನೆಯ ದಿನಕ್ಕೆ ಅದು ಶುದ್ಧಿ ನಂತರ ಮಡಿ....ತಿಂಗಳು ತಿಂಗಳು ಹಜಾಮನನ್ನು ಮುಟ್ಟಿಸಿಕೊಳ್ಳುವ ಮಡಿ ಹೆಂಗಸರು ಮಡಿ. ಯಾವ ಗಂಡಸಿನ ಸಂಪರ್ಕವೂ ಇಲ್ಲದ ಸಕೇಶಿಯರು ಯಾವ ಮಡಿ ಕೆಲಸಕ್ಕೂ ಬಾರದಷ್ಟು ಮೈಲಿಗೆ ಇಂತಹ ನೂರಾರು ಪ್ರಶ್ನೆಗಳು ಫಣಿಯಮ್ಮನ ತಲೆ ತಿನ್ನುತ್ತಿತ್ತು."

ಹೀಗೆ ಕೃತಿಯುದ್ದಕ್ಕೂ ಫಣಿಯಮ್ಮನ ಅಸಾಂಪ್ರದಾಯಿಕ ಚಿಂತನೆ ದಾಖಲಾಗಿದೆ. ಆದರೆ ಫಣಿಯಮ್ಮನ ಈ ವಿಚಾರಗಳೊಳಗೇ 'ಗಂಡಸಿನ ಸಂಪರ್ಕದಿಂದ ದೂರವಾಗಿರುವುದೇ ಮಡಿ' ಹಜಾಮನಿಂದ ಮುಟ್ಟಿಸಿಕೊಳ್ಳುವುದು ಅವನ ಜಾತಿ ಮತ್ತು ಗಂಡಸು ಎಂಬ ಎರಡೂ ಕಾರಣಗಳಿಗಾಗಿ ಮೈಲಿಗೆ ಎಂಬ ನಂಬಿಕೆಯೂ ಕಂಡು ಬರುವುದಿಲ್ಲವೇ? ಹಜಾಮನಿಂದ ಮುಟ್ಟಿಸಿಕೊಳ್ಳುವುದನ್ನು ತಪ್ಪಿಸಿ ತಮ್ಮ ಶುದ್ಧಿಯನ್ನು ಕಾಪಾಡಿಕೊಳ್ಳಲು ದತ್ತೂರಿ ರಸ ಲೇಪಿಸಿ ತಲೆಯನ್ನು ಫಣಿಯಮ್ಮ ಶಾಶ್ವತವಾಗಿ ಬೋಳಾಗಿಸಿಕೊಳ್ಳುವುದನ್ನು ಲೇಖಕಿ ತುಂಬು ಗೌರವದ ಧ್ವನಿಯಲ್ಲಿಯೇ ನಿರೂಪಿಸುತ್ತಾರೆ. ಫಣಿಯಮ್ಮನ ಆಂತರಿಕ ದ್ವಂದ್ವವನ್ನು ಅವರು ಗುರುತಿಸ ಬಯಸುವುದಿಲ್ಲ. ಆದ್ದರಿಂದಲೇ ಅದೇ ಬಗೆಯ ಸನ್ನಿವೇಶ ಮತ್ತೆ ಮತ್ತೆ ಎದುರಾಗುತ್ತವೆ. ಎಳ್ಳಮಾವಾಸ್ಯೆಯ ದಿನ ಆಕೆಯ ಜಡೆ ಕತ್ತರಿಸಲ್ಪಟ್ಟದ್ದು, ಮೈ ನೆರೆದ ನಾಲ್ಕನೆಯ ದಿನವೇ ತಲೆ ಬೋಳಿಸಿದ್ದು ಮತ್ತು ಪುಟ್ಟಾಜೋಯಿಸ–ಸುಬ್ಬಿಯರ ಸಂಬಂಧ ಕಣ್ಣಿಂದ ನೋಡಿದ್ದು ಇವು ಮೂರೂ ಆಕೆಯನ್ನು ಈ ಸಂಸಾರದ 'ಬಂಧನ'ದಿಂದ 'ದೂರ'ಮಾಡಿ 'ಈ ಕೊಳಚೆಯ ಪ್ರಪಂಚದಿಂದ ತಪಸ್ವೀ ಜೀವನದ ಕಡೆಗೆ ಒಯ್ದಿದ್ದವು' ಎಂದು ಲೇಖಕಿ ತಿಳಿಸುತ್ತಾರೆ. ಈ 'ತಪಸ್ವೀತನ'ದ ಮೌಲ್ಯ ಯಾವುದು ಎಂಬುದನ್ನು ನೋಡಬೇಕು.

'ತುಂಗಭದ್ರ'ದಿಂದ ಹಿಡಿದು ಉಳಿದೆಲ್ಲ ಕೃತಿಗಳಲ್ಲಿ ಮದುವೆ–ಸಂಸಾರ, ಸ್ತ್ರೀ–ಪುರುಷರ ಬದುಕಿನ ಅರ್ಥಪೂರ್ಣ ಅನುಭವಗಳೆಂಬುದನ್ನು ಇಂದಿರಾ ಚಿತ್ರಿಸುತ್ತಾರೆ. ಫಣಿಯಮ್ಮನ ವ್ಯಕ್ತಿತ್ವವನ್ನು ಎತ್ತಿ ಹಿಡಿದಿರುವ ರೀತಿಯಲ್ಲಿ ಈ ಹಿಂದಿನ ಧೋರಣೆಯೆಲ್ಲ ಸುಳ್ಳಾಗಲಾರದೆ? ಅಲ್ಲದೆ ಉಳಿದೆಲ್ಲರ ಬಗ್ಗೆ ವಿಚಾರ ಶಕ್ತಿ ಪ್ರಕಟಿಸುವ ಫಣಿಯಮ್ಮ ಜಡೆ ಕತ್ತರಿಸಿದ್ದಕ್ಕೂ ಗಂಡನ ಮರಣಕ್ಕೂ ಸಂಬಂಧ ಕಲ್ಪಿಸಿಕೊಂಡಿದ್ದರೇನೋ ಎಂಬ ಧಾಟಿಯಲ್ಲಿ ಫಣಿಯಮ್ಮನ ಮನೆಯವರು, ಗಂಡನ ಮನೆಯವರು ಆ ಸನ್ನಿವೇಶಗಳನ್ನು ಅಪಶಕುನವೆಂದು ಪರಿಗಣಿಸಿದಂತೆಯೇ ಫಣಿಯಮ್ಮನ ಸ್ಥಿತಿಯೂ ಇತ್ತೆಂದು ಕೃತಿಯ ನಿರೂಪಣೆಯಿಂದ ಭಾಸವಾಗುತ್ತದೆ. ಹುಡುಗಿ ಫಣಿಯಮ್ಮ ಆ ಹೊತ್ತಿನಲ್ಲಿ ಈ ಆಘಾತದೆದುರು ಹಾಗಿರುವುದು ಅಸಹಜವಲ್ಲ. ಆದರೆ ಮುಂದೆ ವಿಚಾರಶೀಲತೆಯು ಫಣಿಯಮ್ಮನಲ್ಲಿ ಬೆಳೆಯಿತೆಂಬುದನ್ನು ರೂಪಿಸುವಾಗ ಈ ನಂಬಿಕೆಗಳು ಬದಲಾದುದನ್ನು ಊಹಿಸಲು ಅವಕಾಶವಿದೆ. ಜಾತಕ–ಲಗ್ನಗಳ ಬಗ್ಗೆ ಆಕೆ ತೋರುವ ತಿರಸ್ಕಾರ;

ದಾಕ್ಷಾಯಿಣಿಯ ಕೇಶ ಮುಂಡನದ ಬಗ್ಗೆ ತೋರಿದ ವಿರೋಧ, ಜಾತಿಯ ಮಡಿವಂತಿಕೆಯ ಬಿಟ್ಟು ಹೆರಿಗೆ ಮಾಡಿಸಿದಾಗಿನ ಮಾನವೀಯ ಔದಾರ್ಯ ಇವೆಲ್ಲವೂ ಆಕೆಯ ವ್ಯಕ್ತಿತ್ವದ ಹಿರಿತನವನ್ನು ರೂಪಿಸುತ್ತವೆ. ಆದರೆ ಕೃತಿಯೊಳಗೆ ಫಣಿಯಮ್ಮನ ಈ ವ್ಯಕ್ತಿತ್ವದ ಅಂಶಗಳು ಸುತ್ತಲಿನವರ ಮೇಲೆ ಪ್ರಭಾವ ಬೀರಲಾರವು. ತಮ್ಮ ಯೋಚನೆಗಳನ್ನು ಆಕೆ ಹೇಳಿಕೊಳ್ಳುವುದೂ ಯಾರೊಂದಿಗೂ ಬಾಯಿ ಬಿಡಲಾರಳೆಂಬ ನಂಬಿಕೆಯಿದ್ದ ಬನಶಂಕರಿಯೊಂದಿಗೆ ಮಾತ್ರ. ಆದರೆ ಫಣಿಯಮ್ಮ ಸುತ್ತಲಿನ ಎಲ್ಲರೂ ಆಕೆ ಯೌವನದ ಕಾಮನೆಯನ್ನು ಗೆದ್ದು, ಸಂಯಮಿಯಾಗಿ ದೇಹ ದಂಡಿಸಿದ್ದನ್ನು ಆಕೆಯ ಶಿಸ್ತು, ತ್ಯಾಗ, ಸೇವೆ, ಸಹನೆ, ಪರೋಪಕಾರ ಮತ್ತು ದುಡಿಮೆಗಳನ್ನು ಮೆಚ್ಚಿ ಗೌರವಿಸುವುದರ ಧಾರಾಳವಾದ ಚಿತ್ರಣವಿದೆ. ಆದರೆ ಸಾಂಪ್ರದಾಯಿಕ ವ್ಯವಸ್ಥೆಯು ವಿಧವೆಯೊಬ್ಬಳಿಂದ ನಿರೀಕ್ಷಿಸುತ್ತಿದ್ದ ಗುಣಗಳೆಲ್ಲದರ ಪ್ರತಿಮೂರ್ತಿಯಾಗಿ ಈಕೆಯ "ತಪಸ್ವೀ"ತನ ದಾಖಲಾಗುತ್ತದೆ. ಫಣಿಯಮ್ಮನಂಥ ಹೆಣ್ಣು ರಾಮಾಯಣ, ಮಹಾಭಾರತ, ಭಾಗವತದಲ್ಲೂ ಇಲ್ಲ' ಆಕೆ ಶಾಪಗ್ರಸ್ತಳಾದ ದೇವತೆಯೆಂಬ ಹೊಗಳಿಕೆಯ ಜೊತೆಯಲ್ಲೇ 'ಅಜ್ಜಿಯರದೇ ಒಂದು ಜಾತಿ! ಮಡಿ ಜಾತಿ! ಅದೂ ರಾತ್ರಿ ಫಲಹಾರ ಮಾಡುವ ಜಾತಿ! ಎಂಬ ಹುಡುಗರ ಆಲೋಚನೆಯೂ ದಾಖಲಾಗುತ್ತದೆ. ಈ ಎರಡನ್ನೂ ಫಣಿಯಮ್ಮನ ವ್ಯಕ್ತಿತ್ವದಲ್ಲಿ ದಾಖಲಿಸಲು ಲೇಖಕಿ ಯತ್ನಿಸಿದ್ದಾರೆ. ಅಂದರೆ ತಾನು ಪಟ್ಟ ಬವಣೆ ಯಾತನೆಗಳಿಗಾಗಿ ಈಕೆ ತಪಸ್ವಿನಿಯಾಗಿ ಎತ್ತಿ ಹಿಡಿಯಲ್ಪಟ್ಟಿದ್ದಾಳೆಂಬ ಅಂಶವೇ ಕೊನೆಯ ಧ್ವನಿಯಾಗುತ್ತದೆ.

ಕಳೆದ ಶತಮಾನದ ಪಂಡಿತ ರಮಾಬಾಯಿ ಸರಸ್ವತಿ' ಈ ಶತಮಾನದ ತಿರುಮಲಾಂಬ, ಕಲ್ಯಾಣಮ್ಮನಂಥವರ ಜ್ವಲಂತ ಉದಾಹರಣೆಗಳು ನಮ್ಮೆದುರಿದ್ದೂ 'ಫಣಿಯಮ್ಮ'ನು ಪ್ರತಿಪಾದಿಸುವ ಮೌಲ್ಯವು ಈ ರೀತಿ ಕೊಂಡಾಡಲ್ಪಡಬಹುದೇ? ಎಂದು ಯೋಚಿಸಿದಲ್ಲಿ ಎಂ.ಕೆ. ಇಂದಿರಾ ಬದಲಾಗುವ, ಬದಲಾಗಲೇಬೇಕಾದ ಮೌಲ್ಯಗಳ ಬಗ್ಗೆ, ಸಮಕಾಲೀನ ಜಗತ್ತಿನ ಆಗು ಹೋಗುಗಳಿಗೆ ಸ್ಪಂದಿಸುವುದಕ್ಕಿಂತಲೂ ಹೆಚ್ಚಾಗಿ ಗತಿಸಿದ ಬದುಕಿನ ಮೌಲ್ಯಗಳತ್ತಲೇ ಒಲವು ತೋರುವುದು ಖಚಿತವಾಗುತ್ತದೆ. ಹೀಗಾಗಿ ಕನ್ನಡದ ಆಧುನಿಕ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಪರವಾದಂತಿದ್ದರೂ ಈಕೆ ಪುರಾಣ ಮೌಲ್ಯಗಳ ಶೋಧನೆಗೆ ಹೊರಟವರಾಗಿರುವುದರಿಂದ ಅವರ ಕೃತಿಗಳು ಸಮಕಾಲೀನ ಜಗತ್ತಿಗೆ ದೂರವಾಗಿ ಬೇರೊಂದು ಗ್ರಾಮೀಣ ಲೋಕಕ್ಕೆ ನಡೆಸುವ ಪ್ರಯಾಣಗಳಾಗಿವೆ ಎನ್ನಬಹುದು.

['ಎಂ. ಕೆ. ಇಂದಿರಾ ಅವರ ಕಾದಂಬರಿಗಳು' ಲೇಖನದ ಒಂದು ಆಂಶಿಕ ಭಾಗ]

ಸೂಳೆತನದಿಂದ ಯಾರಿಗೆ ಗೌರವ ?

ಫೆಬ್ರವರಿ 16, 17, 18 ರಂದು ಬೆಂಗಳೂರಿನಲ್ಲಿ ಜಾಗೃತ ಸಾಹಿತ್ಯ ಸಮಾವೇಶ ನಡೆಯಿತು. ಸಮಾವೇಶದ ಗೋಷ್ಠಿಯೊಂದರ ಅಧ್ಯಕ್ಷತೆ ಡಾ॥ ಅನುಪಮಾ ನಿರಂಜನ ಅವರದು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಟಿ. ಜಿ. ರಾಘವ ಅವರ ಭಾಷಣದಲ್ಲಿನ 'ಸೂಳೆ'ಪದದ ಬಳಕೆಯನ್ನು ಕುರಿತು ಪ್ರತಿಭಟಿಸಿದರು. "ಅನುಭವವನ್ನು ಶೋಧಿಸುವ ಕ್ರಿಯೆಯಲ್ಲಿ ಭಾಷೆಯ ಪಾತ್ರ ಅಗಾಧ. ಭಾಷೆಯನ್ನು ಸಾಧಾರಣ ಎರಡು ರೀತಿಯಲ್ಲಿ ಬಳಸುತ್ತೇವೆ. ಭಾವನಾತ್ಮಕವಾಗಿ ಮತ್ತು ವೈಜ್ಞಾನಿಕವಾಗಿ. ಭಾವನಾತ್ಮಕವಾಗಿ ಬಳಸುವ ಭಾಷೆ ಸೂಳೆಯಂತೆ. ಹೆಚ್ಚಿನ ಉಪಯೋಗದಿಂದ ಬಹಳ ಬೇಗನೆ ತನ್ನ ಶಕ್ತಿ, ಕಲೆ, ಆಕರ್ಷಣೆಗಳನ್ನು ಕಳೆದುಕೊಂಡು ಬಿಟ್ಟು ಜಡವಾಗಿ ಬಿಡುತ್ತದೆ". ಟಿ. ಜಿ. ರಾಘವ ಅವರ ಈ ಮಾತುಗಳನ್ನು ಕುರಿತು ಅನುಪಮಾರವರು "ಈ ರೀತಿಯಲ್ಲಿ ಸ್ತ್ರೀಯರ ಕುರಿತಾದ ಪದ ಬಳಕೆ ನನಗೆ ನೊವುಂಟುಮಾಡಿತು".... ಎಂದರು.

ಮಾರ್ಚ್ 4ರ ಲಂಕೇಶ್ ಪತ್ರಿಕೆಯಲ್ಲಿ ಲಂಕೇಶರು 'ಮರೆಯುವ ಮುನ್ನ' ಕಾಲಂನಡಿ ಈ ವಿಷಯ ಕುರಿತಾಗಿ ಹೀಗೆ ಬರೆದಿದ್ದಾರೆ—"ಎಲ್ಲ ಹಂತದಲ್ಲೂ ಮಹಿಳೆಯರ ಪರವಾಗಿ ಮಾತನಾಡಿದ ಅನುಪಮಾ 'ಸೂಳೆ'ಪದಕ್ಕೆ ಆಕ್ಷೇಪಣೆ ಎತ್ತಿದರು. ಟಿ. ಜಿ. ರಾಘವ ಅದ್ಯಾವುದೋ ಸಂದರ್ಭದಲ್ಲಿ ಲೇಖಕರ ಸೂಳೆತನ ಕುರಿತು ಹೇಳಿದ್ದರು. ಅನುಪಮಾ ಸೂಳೆಪದ ಕೇಳಿದೊಡನೆ ಸಿಟ್ಟುಗೊಂಡರು. ನನಗೆ ಆಶ್ಚರ್ಯವಾಯಿತು. ನಿಘಂಟಿನಿಂದ ಒಂದು ಪದವನ್ನು ಕಿತ್ತು ಹಾಕಕೂಡದು; 'ಸೂಳೆಕೆರೆ' ಇವತ್ತಿಗೂ 'ಶಾಂತಿಸಾಗರ'ಕ್ಕಿಂತ ಒಳ್ಳೆಯ ಹೆಸರು; ಸೂಳೆಗೆ ಗರತಿಗಿರುವಷ್ಟೇ ಮರ್ಯಾದೆ, ಪರಂಪರೆ ಇದೆ. "ಇವರೆಲ್ಲ ಸಾಹಿತ್ಯದ ಗರತಿಯರು" ಎಂಬ ವಿವರಣೆ ಕೂಡ ತನ್ನ ವ್ಯಂಗ್ಯದಿಂದ "ಸೂಳೆ"ಯಷ್ಟೇ ಪರಿಣಾಮ ಬೀರಬಲ್ಲುದು. ಅನುಪಮಾರ ಸೀತೆಯ ಮೇಲೆ ಬರೆದ ಒಂದು ಕವನದಲ್ಲಿ ಸೀತೆ ಅಶೋಕವನದಲ್ಲಿ ಕುಳಿತು ಬೇರೆ ಗಂಡಸರ ಬಗ್ಗೆ ಯೋಚಿಸುತ್ತಾಳೆ. ಇದನ್ನು ಸೂಳೆತನ ಅಂದರೂ ತಪ್ಪಾಗಲಾರದು. ಹಾದರದ ಚಿಂತೆ, ವ್ಯಭಿಚಾರದ ಹಂಬಲ ಇವೆಲ್ಲ ಅದನ್ನೇ ಹೇಳಿದರೂ ಅಷ್ಟು ಚೆನ್ನಾಗಿ ಹೇಳುವುದಿಲ್ಲ."

ಇದಕ್ಕೆ ಕವಿಯಿತ್ರಿ ಪ್ರತಿಭಾ ನಂದಕುಮಾರ್‌ರವರ ಪ್ರತಿಕ್ರಿಯೆ ಅದೇ ಪತ್ರಿಕೆಯಲ್ಲಿ ಮೂಡಿಬಂದದ್ದು ಹೀಗೆ; "ಸೂಳೆಯನ್ನು ಸೂಳೆ ಎನ್ನಬಾರದಾದರೆ ಗರತಿಯನ್ನು ಗರತಿ ಎಂದೂ, ಸಂನ್ಯಾಸಿನಿಯನ್ನು ಸಂನ್ಯಾಸಿ ಎಂದೂ, ಬ್ರಹ್ಮಚಾರಿಯನ್ನು ಬ್ರಹ್ಮಚಾರಿ ಎಂದೂ ಕರೆಯಲಾಗದು....ಅದೇ ಸಭೆಯಲ್ಲಿ ಲೇಖಕಿ ಒಬ್ಬರು 'ಮಿಂಡ' ಎನ್ನುವ ಪದ,ಬಳಸಿದ್ದರೆ, ಯಾರಾದರೂ ಗಂಡಸು ಎದ್ದು ನಿಂತು ದಯವಿಟ್ಟು ಆ ಪದ ಬಳಸಬೇಡಿ, ಗಂಡಸಾದ ನನ್ನ ಮನಸ್ಸಿಗೆ ನೋವಾಗುತ್ತದೆ' ಎಂದು ಹೇಳುತ್ತಿದ್ದರೇ? calling a spade a spade ದೃಷ್ಟಿ ಲೇಖಕಿಯರಿಗೆ ಇಲ್ಲದಿದ್ದರೆ, ಇರುವುದನ್ನು ಇದ್ದಂತೆಯೇ ಹೇಳುವ ಮನೋಭಾವ ಇಲ್ಲದಿದ್ದರೆ, ಲೇಖಕಿಯರು ಹೆಚ್ಚಿನದೇನನ್ನು ಸಾಧಿಸಲು ಸಾಧ್ಯ? ಯುಕ್ತ ಭಾಷೆಗೆ ಮಡಿವಂತಿಕೆಯ ಕಟ್ಟು ಬೀಳದಿರಲಿ ಅಲ್ಲವೇ?" ಎಂದಿದ್ದಾರೆ.

ರಾಘವರು ಲೇಖಕರ ಸೂಳೆತನದ ಬಗ್ಗೆ ಮಾತನಾಡಲಿಲ್ಲವೆಂದೂ, ಸೂಳೆಯನ್ನು ಸೂಳೆಯಾಗಿ ಕರೆದದ್ದಲ್ಲವೆಂದೂ ಈ ಇಬ್ಬರೂ ಲೇಖಕರಿಗೆ ತಿಳಿಯಬಯಸುತ್ತೇವೆ. ಈ ವಿಷಯವನ್ನು ಕುರಿತಾದ ಕೆಲವು ಚಿಂತನೆಗಳು ಇಲ್ಲಿವೆ.

—ಅಚಲ

ಭಾವುಕ ಪರಿಹಾರ ಬೇಡ !

‘ಸೂಳೆ’ ನಿರ್ದಿಷ್ಟ ಸ್ತ್ರೀಲಿಂಗ ಪದ. ಸೂಳೆ ಪದಕ್ಕೆ ಕನ್ನಡ ನಿಘಂಟಿನಲ್ಲಿರುವ ಅರ್ಥ – ವೇಶ್ಯೆ, ಹಾದರ ಮಾಡು ಎಂದು. ‘ವಿಟ’ – ನಿರ್ದಿಷ್ಟ ಪುಲ್ಲಿಂಗ ಪದ. ಕಾಮುಕ, ಜಾರ ಎಂಬ ಅರ್ಥವಿದೆ. ಒಂದು ಬಗೆಯಲ್ಲಿ ಸೂಳೆ – ವಿಟ ಒಂದೇ ಅರ್ಥ ಕೊಡುವ ಸ್ತ್ರೀಲಿಂಗ – ಪುಲ್ಲಿಂಗ ಪದಗಳು.

ಆಡುಮಾತಿನಲ್ಲಿ ‘ಸೂಳೆ’ ‘ಹಾದರ’ ವಿಧ ವಿಧ ಅರ್ಥ ಪಡೆದಿವೆ. ಹಣಕ್ಕಾಗಿ ತನ್ನ ದೇಹವನ್ನು ಮಾರಿಕೊಳ್ಳುವವಳು ‘ಸೂಳೆ’ ಯಾಗಿದ್ದಾಳೆ. ಕನ್ನಡದಲ್ಲಿನ್ನೂ ಹಣಕ್ಕಾಗಿ ತನ್ನ ದೇಹವನ್ನು ಮಾರಿಕೊಳ್ಳುವ ಗಂಡಸಿಗೆ ಯಾವ ಪದವೂ ಇಲ್ಲ. ಇಂಗ್ಲಿಷ್ ನಿಘಂಟಿನಲ್ಲಿ ಇವಕ್ಕೆ Prostitute-gigalo ಎಂಬ ವಿಭಿನ್ನ ಪದಗಳಿವೆ.

ಒಟ್ಟಿನಲ್ಲಿ, ಸ್ತ್ರೀ – ಪುರುಷರಿಬ್ಬರೂ ‘ಹಾದರ’ ವನ್ನು ಮಾಡಿದರೂ, ಹಾದರ ಮಾಡುವ ಹೆಣ್ಣಿಗೆ ‘ಸೂಳೆ’ ಎಂದು ಧಾರಾಳವಾಗಿ ಬಳಸುವಂತೆ, ಹಾದರ ಮಾಡುವ ಗಂಡಿಗೆ ‘ವಿಟ’ ಎನ್ನುವುದಿಲ್ಲ. ಒಬ್ಬನಿಗಿಂತ ಹೆಚ್ಚು ಗಂಡಸನ್ನು ಮನಸ್ಸಿನಲ್ಲಿ ಧ್ಯಾನಿಸಿದರೂ ಹಾದರವಾಗಿ ಬಿಡುವ ‘ರೇಣುಕೆಯರ ನಾಡಿ’ ನಲ್ಲಿ, ಗಂಡಿನ ಹಾದರ, ಅದು ಕೃಷ್ಣ – ರಾಧೆಯರದಾಗಲಿ ಶಿವ – ಗಂಗೆಯರದಾಗಲಿ, ಇಲ್ಲ ಇಬ್ಬಿಬ್ಬರನ್ನು ಒಟ್ಟಿಗೆ ಇಟ್ಟುಕೊಳ್ಳುವ ನಮ್ಮ ಈಗಿನ ಗಂಡಸರಿಗಾಗಲಿ, ‘ಜಾರ’ ‘ವಿಟ’ ‘ಹಾದರಿಗ’ ಪದಗಳು ಅನ್ವಯಿಸುವುದೇ ಇಲ್ಲ. ಸೂಳೆ ಪದವನ್ನು ಧಾರಾಳವಾಗಿ ಬಳಸುವ ನಮ್ಮ ಲೇಖಕರು, ವಿಚಾರವಂತರು, ‘ವಿಟ’ ಪದವನ್ನು ಬಳಸುವುದು ಅಪರೂಪ. ನಿಘಂಟಿನಲ್ಲಿ ‘ಸೂಳೆ’ ಯಂತೆಯೇ ‘ವಿಟ’ನೂ ಇದ್ದಾನೆ. ಇದು ಕೇವಲ ಭಾಷೆಯ ಗೊಂದಲವಲ್ಲ, ನಮ್ಮ ಸಮಾಜದ ದ್ವಿಮುಖ ಧೋರಣೆ.– ಸ್ತ್ರೀಯರನ್ನು ಪರಪುರುಷನ ನೆರಳು ಕಂಡರೂ ಅಪವಿತ್ರವಾಗಿಸಿ, ಹಾದರಗಿತ್ತಿಯಾಗಿಸುತ್ತದೆ, ಪುರುಷರ ಹಾದರವನ್ನು ಪವಿತ್ರ ಪ್ರೇಮ ಎಂದೋ ಅತಿಕಾಮುವನ್ನು ಶೌರ್ಯ ಎಂದೋ ಬಣ್ಣಿಸಿ ತೃಪ್ತವಾಗುತ್ತದೆ.

ಇದು ಕೇವಲ ಸೂಳೆಯನ್ನು – ಸೂಳೆಯಾಗಿ ಕರೆದಷ್ಟು ಸರಳವಲ್ಲ. ಬಹುಮುಖ್ಯವಾಗಿ ಶ್ರೀ ಟಿ. ಜಿ. ರಾಘವ ಅವರು ಬಳಸಿದ ರೀತಿ ಗಮನಿಸಬೇಕು — ಭಾವನಾತ್ಮಕವಾಗಿ ಬಳಸುವ ಭಾಷೆ ಸೂಳೆಯಂತೆ. ಹೆಚ್ಚಿನ ಉಪಯೋಗದಿಂದ ಬಹಳ ಬೇಗನೆ ತನ್ನ ಶಕ್ತಿ, ಕಲೆ, ಆಕರ್ಷಣೆಗಳನ್ನು ಕಳೆದುಕೊಂಡು ಬಿಟ್ಟು ಜಡವಾಗಿ ಬಿಡುತ್ತದೆ ! ರಾಘವ ಅವರು ಸೂಳೆಯನ್ನು ಸೂಳೆ ಎನ್ನಲು ಹೋಗಿರಲಿಲ್ಲ ಎಂಬುದನ್ನು ಪ್ರತಿಭಾರವರಿಗೆ ತಿಳಿಸಬಯಸುತ್ತೇವೆ. ಅವಶ್ಯಕತೆಯೋ ಇಲ್ಲದೆ, ಔಚಿತ್ಯ ಮೀರಿ ‘ಸೂಳೆ’ ಪದದ ಬಳಕೆಗೆ ಕಾರಣ ನಮ್ಮ ಗಂಡು ಸಮಾಜದಲ್ಲಿರುವ ‘ಅತಿ ಬಳಕೆಯಿಂದ ಹೆಣ್ಣು ಶಕ್ತಿಗುಂದಿ ಕಲಾಹೀನಳಾಗುತ್ತಾಳೆಂಬ’ ಪ್ರತಿಮೆ. ಇಲ್ಲಿ ಲೈಂಗಿಕ ಕ್ರಿಯೆಯಲ್ಲಿ ಬಳಸುವವನು – ಬಳಸಲ್ಪಡುವವಳು ಕೊಟ್ಟು

○ ನೇಮಿಚಂದ್ರ

ಕೊಳ್ಳೊ ಹಣದ ವಿಷಯದಲ್ಲಿ ವ್ಯತ್ಯಾಸವಿದ್ದರೂ, ಕ್ರಿಯೆಯಲ್ಲಿಯ ಸಮಭಾಗದಲ್ಲಿ ವ್ಯತ್ಯಾಸವಿಲ್ಲ. ದಿನಕ್ಕೊಂದು ಹೆಣ್ಣಿನೊಡನೆ ಮಲಗುವ ಗಂಡೂ ಕೂಡ ಅಷ್ಟೇ ಕಲಾಹೀನನಾಗಿ ಶಕ್ತಿಗುಂದುವುದನ್ನು ನಮ್ಮ ಲೇಖಕರು ಚಿಂತಿಸಲೂ ಇಚ್ಛಿಸುವುದಿಲ್ಲ. ಹಾಗೆಂದೇ ಅವರ ಭಾಷೆಯಲ್ಲಿ ಅಂಥಾ ಪ್ರತಿಮೆಗಳು ಮೂಡುವುದಿಲ್ಲ. ಭಾಷೆ ಹಾಗೂ ಬದುಕಿಗೆ ನಿಕಟ ಸಂಬಂಧವಿದೆ.

ರಾಘವರು ಬೇಕೆಂದೇ ನಮ್ಮ ಮನಸ್ಸನ್ನು ನೋಯಿಸುವ ಉದ್ದೇಶದಿಂದ ಬಳಸಿದ್ದಾರೆ ಎಂದು ಹೇಳುತ್ತಿಲ್ಲ. ಅತ್ಯಂತ ಆಳದಲ್ಲಿ ಅತಿ ಸೂಕ್ಷ್ಮವಾಗಿ ಇರುವ ಸಮಾಜದ ಸ್ತ್ರೀ - ಪುರುಷರ ಅಸಮಾನ ಸಂಬಂಧಗಳು, ಸ್ತ್ರೀ – ವಿರೋಧಿ ನೀತಿಗಳು ಆಳದಲ್ಲಿ ಕೆಲಸಮಾಡಿ, ಅಂಥಾ ಪದಗಳ ಅರಿವಿಗೇ ಇಲ್ಲದಂತೆ ಬಳಸಿರಬಹುದು. ಸಾಂಪ್ರದಾಯಿಕ ಸ್ತ್ರೀ – ಪ್ರತಿಮೆಗಳ ಒಪ್ಪಿಕೊಂಡೋ ಇಲ್ಲ, ಆ ಪ್ರತಿಮೆಗಳಿಂದ ಬುದ್ಧಿಪೂರ್ವಕವಾಗಿ ಬಿಡುಗಡೆ ಪಡೆಯ ಬಯಸಿದಾಗ ಆಗುವ ಅಚಾತುರ್ಯಗಳಿವು.

ನಾವು ಸ್ತ್ರೀಯರಷ್ಟೆ ಅಲ್ಲ, ಸ್ತ್ರೀಪರ ವಿಚಾರವಂತ ಗಂಡಸರೂ ವಿರೋಧಿಸುವುದಕ್ಕೆ ಕಾರಣ ನಮ್ಮ 'ಮಡಿವಂತಿಕೆ' ಖಂಡಿತಾ ಅಲ್ಲ. ವಿದ್ಯಾವಂತ ವಿಚಾರವಂತ ಲೇಖಕರೂ ಬೇಜವಾಬ್ದಾರಿಯಿಂದ ಬಳಸುವ ಪದಗಳ – ಪ್ರತಿಮೆಗಳ ಬಗ್ಗೆ ಇರುವ ನಮ್ಮ ಕಳಕಳಿ ಮಾತ್ರ.

ನಮ್ಮ ನಿಘಂಟಿನಲ್ಲಿನ್ನೂ 'ಸೂಳೆ' ಪದ ಇರಲು ಕಾರಣ ನಮ್ಮ ಸಮಾಜದಲ್ಲಿನ್ನೂ 'ಸೂಳೆ' ಗಾರಿಕೆಗೆ ಇಳಿಸುವ, ಸೂಳೆಯರನ್ನಾಗಿಸಿ ಪೋಷಿಸುವ ಗಂಡಸರು ಇರುವುದರಿಂದಲೇ, ನಿಘಂಟಿನಿಂದಲ್ಲ. ನಮ್ಮ ಸಮಾಜದಿಂದಲೇ ಸೂಳೆಗಾರಿಕೆಯನ್ನು ಕಿತ್ತುಹಾಕಲು ಪ್ರತಿಯೊಬ್ಬ ಪ್ರಜ್ಞಾವಂತನೂ ಬಯಸುತ್ತಾನೆ. ಇಲ್ಲಿ ಸ್ವಇಚ್ಛೆಯಿಂದ ತಮ್ಮ ದೇಹವನ್ನು ಯಾವ ರೀತಿಯಲ್ಲಾದರೂ ಬಳಸಿಕೊಳ್ಳುವವರಿಗೆ 'ಸೂಳೆ' ಪದವನ್ನು ಬಳಸುವುದು ಉಚಿತವಲ್ಲ. ಹಣಕ್ಕಾಗಿ ಎಳೆ ಹುಡುಗಿಯರ ಸೂಳೆತನಕ್ಕಿಳಿಸುವ, ದೇವರ ದಿಂಡರ ಹೆಸರಿನಲ್ಲಿ ತಮ್ಮ ಕಾಮುಕತೆಯ ಲಾಭ ಪಡೆಯುವ ಪದ್ಧತಿಗಳು ಅಳಿಯಬೇಕು. ಸೂಳೆಗೆ ಗರತಿಯಷ್ಟೆ ಗೌರವವಿದೆ ಎಂಬ ಭಾವುಕ ಪದಗಳು ಸೂಳೆಗಾರಿಕೆಯ ಗಟ್ಟಿ ಸಮಸ್ಯೆಯನ್ನು ರಮ್ಯವಾಗಿ ಕಂಡು ಹಗುರಾಗಿಸುತ್ತದೆ. ಅಷ್ಟೆ ಭಾವುಕ ಲೇಖಕರು ಪದಗಳಲ್ಲಿ ಎಷ್ಟು ಗೌರವ ಸೂಚಿಸಿದರೂ, ಈ ಹೆಣ್ಣುಗಳು ಐದೈದು ರೂಪಾಯಿಗೆ ತಮ್ಮನ್ನು ಮಾರಿಕೊಳ್ಳಬೇಕಾದ ಅನಿವಾರ್ಯತೆ, ತಮ್ಮ ಸುತ್ತ ನಿಂತ ಭದ್ರಬೇಲಿಯಾಚೆ ಹಾರಲಾರದ್ದು, ಮದುವೆ – ಮಕ್ಕಳ ಕನಸು ಕಾಣಲಾರದ್ದು ಏಕೆ ? ಅಷ್ಟು ಗೌರವ ಭಾವುಕತೆಯಿಂದ ಬರೆದರೂ ನಮ್ಮ ಸಮಾಜ ಆಕೆಯನ್ನು ಸೂಳೆಯಾಗಲ್ಲದೆ ಬೇರೆ ರೂಪದಲ್ಲಿ ಸ್ವೀಕರಿಸಲು ಸಿದ್ಧವಿದೆಯೆ? ಆಕೆ ಸಮಾಜದಲ್ಲಿ ಎಲ್ಲರಂತೆ ಬಾಳಲು ಸಾಧ್ಯವಾಗದ ಮೇಲೆ, ಇವೆಲ್ಲರ ಹುಸಿ - ಸಹಾನುಭೂತಿ, ಗೌರವದಿಂದ ಯಾರಿಗೆ ಲಾಭ ? ಇಂದಿಗೂ ಅನ್ಯಾಯವಾಗಿಯೇ 'ಸೂಳೆ' ಯನ್ನು 'ಥೂ' ಎನ್ನುವ ಅದೇ 'ವಿಟ' ನನ್ನು (ಇವರು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಿಂದ ಹಿಡಿದು, ಕೊಳಚೆ ಕೊಂಪೆಯ ಜನಗಳವರೆಗೂ ಹರಿದಿದ್ದಾರೆ) ಗೌರವದಿಂದ ಕಾಣುವ ನಮ್ಮ ಅಸಮಾನ ನೀತಿಗೆ ಹೇಸಿಗೆ ಅನಿಸುವುದಿಲ್ಲವೆ ? 'ಸೂಳೆ' ಯ ಸಮಸ್ಯೆಯನ್ನು ವಾಸ್ತವದ ಹಂತದಲ್ಲಿ ಪರಿಹರಿಸುವತ್ತ ಯೋಜಿಸಬೇಕು, ಭಾವುಕ ಪದಗಳಲ್ಲಿ ಮರೆಮಾಚುವತ್ತಲ್ಲ.

ಯಾವ ಜಾತಿವಾದಕ್ಕೆ ಕಡಿಮೆ ?

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಹುಟ್ಟಿದ/ ಹಾದು ಬಂದ ಅನೇಕ ಭಾಷೆಗಳಲ್ಲಿ ಕನ್ನಡವೂ ಒಂದು. ಹೆಂಗಸಿನ ದೃಷ್ಟಿಯಿಂದ ಪುರುಷ ದೃಷ್ಟಿಕೋನದಿಂದ ನಿರ್ಮಿತಿಯಾದ ಸಂಸ್ಕೃತಿಯು ಕೆಲವು ಅಂಶಗಳಲ್ಲಿ ಅರ್ಥಹೀನವೂ ದಮನಕಾರಿಯೂ ಆದದ್ದಾಗಿದೆ. ಈ ಮಾತು ಆ ನೆಲೆಯಿಂದ ಹುಟ್ಟಿಬಂದ ಭಾಷೆಗೂ ಅನ್ವಯಿಸುತ್ತದೆ. ಈ ಸಂಸ್ಕೃತಿಯ, ಭಾಷೆಯ ದಮನಕಾರಿ ಅಂಶಗಳನ್ನು ಎಚ್ಚರಗೊಳ್ಳುತ್ತಿರುವ ಸ್ತ್ರೀಪರ ನಿಲವು ಗುರುತಿಸಲಾರಂಭಿಸಿದೆ. ಈ ಗುರುತಿಸುವಿಕೆ ಪ್ರಾರಂಭದಲ್ಲಿ ಹುಟ್ಟಿಸಬಹುದಾದ ಗೊಂದಲ, ಪಡೆಯಬಹುದಾದ ಲಘು ತಿರಸ್ಕಾರವನ್ನು ಈಚೆಗೆ ಟಿ. ಜಿ. ರಾಘವರು ಸೂಳೆ ಶಬ್ದವನ್ನು ಬಳಸಿದ್ದಕ್ಕೆ ಆನುಪಮ ಅವರು ತೋರಿದ ಪ್ರತಿಕ್ರಿಯೆಗೆ ಬಂದ ಪ್ರತಿಕ್ರಿಯೆಗಳಲ್ಲಿ ಕಾಣಬಹುದು.

ಲೈಂಗಿಕ ಸುಖವನ್ನು ಹೆಣ್ಣೇ ಏಕೆ ಮಾರಿಕೊಳ್ಳುತ್ತಾಳೆ ? ಮಾರಿಕೊಳ್ಳಬೇಕಾಗುತ್ತದೆ ? ಈ ಮಾರಿಕೊಳ್ಳು

○ ವಿಜಯಾ ದಬ್ಬೆ

ವಿಕೆಯಲ್ಲಿ ಅವಳು ಯಾವಾಗಲೂ ಸಂತೋಷಿಸುತ್ತಾಳೆಯೇ ? ಕೊಳ್ಳುವವರ, ಸಮಾಜದ ದ್ವಿಮುಖ ನೀತಿಯ ಪಾತ್ರ ಇದರಲ್ಲಿ ಏನು ? ತಿನ್ನುವ ಒಂದೊಂದು ರೊಟ್ಟಿಗೂಬೇಕಾದವನೊಂದಿಗೋ ಬೇಡಾದವನೊಂದಿಗೋ ಬೇಕಾಗಲೀ ಬೇಡವಾಗಲೀ ಮಲಗೇಳಬೇಕಾದಾಗ ಅವಳ ಕಣ್ಣಲ್ಲಿ ಸುರಿಯುವುದು ಕಣ್ಣೀರೋ ರಕ್ತವೋ ಅನಂತ ಬಾಷ್ಪವೋ ? ಈ ವಿಚಾರಗಳ ಹಿನ್ನೆಲೆಯಲ್ಲಿ ನಾವು 'ಸೂಳೆ', 'ಸೂಳೆಗಾರಿಕೆ' ಶಬ್ದದ ಬಳಕೆಯಲ್ಲಿಡಗಿರುವ ಸೂಕ್ಷ್ಮವಾದ ಕ್ರೌರ್ಯವನ್ನು ಗುರುತಿಸಲು ಸಾಧ್ಯವಾದರೆ ನಾವು ಲೀಲಾಜಾಲವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಸೂಳೆ ಶಬ್ದವನ್ನು ಬಳಸಲಾದೀತೆ ? ಭಾಷೆಯಲ್ಲಿಡಗಿರುವ ಈ ಅಂತರ್ಗತ ಕ್ರೌರ್ಯದ ಬಗ್ಗೆ ದನಿಯೆತ್ತುವುದು ಮಡಿವಂತಿಕೆಯೆ ? ಕಲಾವಂತೆಯರಿಗಿದ್ದ ಗೌರವ, ಪರಂಪರೆಯನ್ನು ಕೇವಲ ಮೈಮಾರುವಿಕೆಗೆ ಸೀಮಿತಗೊಂಡ 'ಸೂಳೆಗಾರಿಕೆ'ಗೆ ನಾವು ಆರೋಪಿಸುವುದು, ಸೂಳೆಗಾರಿಕೆ,

ಕಲಾವಂತಿಕೆ, ಹಾದರಗಳನ್ನು ಬೆರಸಿ ಮಾತಾಡುತ್ತಾ ಸೂಳೆಯರಿಗಿರುವ ಘನತೆ, ಗೌರವ, ಪರಂಪರೆಯ ಬಗ್ಗೆ ಕೊಚ್ಚುವುದು ಸಮಾಜದಲ್ಲಿಲ್ಲದ ಒಂದು ವಸ್ತುಸ್ಥಿತಿಯನ್ನು ಇದೆಯೆನ್ನುವುದಾಗುತ್ತದೆ, ಪ್ರತಿಗಾಮಿಮೂಲದ ರಮ್ಯೀಕರಣವಾಗುತ್ತದೆ. ನಮಗೆ ಮಾತ್ರ ಲೈಂಗಿಕ ಸ್ವಾತಂತ್ರ್ಯವಿರಲಿ ಉಳಿದವರಿಗೆ ಆ ಸ್ವಾತಂತ್ರ್ಯ ಅನಗತ್ಯ ಅಸಾತಂತ್ರ್ಯವೇ ಅವರಿಗೆ ಸೊಗಸು ಎನ್ನುವ ನೀತಿ ಯಾವ ಜಾತಿವಾದಕ್ಕೆ, ಜನಾಂಗವಾದಕ್ಕೆ ಕಡಿಮೆಯಾದದ್ದು ?.

ಭಾಷೆಯ ಸ್ವರೂಪದ ಹಿಂದಿರುವ ಚಾರಿತ್ರಿಕತೆ, ರಾಜಕೀಯವನ್ನು ಗುರುತಿಸುವುದು, ಕಾಲ–ವಿಚಾರಗಳು ಬದಲಾಗುವಾಗ ಭಾಷಾ ಬಳಕೆಯ ರೀತಿಯೂ ಬದಲಾಗಬೇಕಾದ್ದು ಅನಿವಾರ್ಯವಲ್ಲವೆ ? ಪ್ರಗತಿ, ಪ್ರಗತಿಯೆಂದು ಪಲ್ಲವಿಸುವವರಿಗೆ ಈ ಬದಲಾವಣೆಯ ಅಗತ್ಯ ಕಾಣದಿರುವುದನ್ನು ಏನೆಂದು ಕರೆಯೋಣ ?

ಇದು ಎಂತಹ ಸಂಸ್ಕೃತಿ !

'ಬಡವರ ಸೇವೆ ಮಾಡುವ ಅವಕಾಶ ಸಿಕ್ಕಿರುವುದೇ ನಮ್ಮ ಪುಣ್ಯ' ಎಂದೆನ್ನುವ ಸಂಸ್ಕೃತಿ ನಮ್ಮದು. ನಮಗೆ ಪುಣ್ಯ ದೊರಕಿಸಲೆಂದೇ ಬಡವರು, ನಿರ್ಭಾಗ್ಯರು ಇರಬೇಕಲ್ಲವೇ ? ಈ ವಾದವನ್ನು ಹೀಗೆ ಮುಂದುವರಿಸಿದರೆ ಸೂಳೆಯರು ಇರುವವರೆಗೂ ಅವರಿಗೆ ಅನುಕಂಪ ತೋರಿಸಲು ಸಾಧ್ಯ. ಅವರಿಲ್ಲದಿದ್ದರೆ ಅವರ ಬಗ್ಗೆ ಸಂತಾಪದ ನುಡಿಯಾಡಲು ಅವಕಾಶವಾದರೂ ಎಲ್ಲಿರುತ್ತದೆ? ಈ ಎರಡೂ ನಿದರ್ಶನಗಳಿಗೂ ಹೋಲಿಕೆಯಾಗಲೀ, ಸಂಬಂಧವಾಗಲೀ ಇಲ್ಲ. ಆದರೆ ಇಲ್ಲಿ ನಾನು ಹೇಳಬಯಸಿದ್ದು ಇಷ್ಟು. ಸಮಾಜದಲ್ಲಿ ಹೆಣ್ಣಾದವಳೊಬ್ಬಳು ಸೂಳೆಯಾಕಾಗುತ್ತಾಳೇ ? ಸ್ವಂತ ಇಚ್ಛೆಯಿಂದಲೋ, ಪರರ ಇಚ್ಛೆಯಿಂದಲೋ ಎಂದು ಚರ್ಚಿಸುವುದಕ್ಕಿಂತ, ಎಲ್ಲಿಯ ತನಕ ಪುರುಷ ಸಮಾಜ ತನ್ನ ಅಗತ್ಯಕ್ಕಾಗಿ ಸೂಳೆಗಾರಿಕೆಯನ್ನು ಬಯಸುತ್ತದೋ, ಅಲ್ಲಿಯವರೆಗೆ ಅದು ಖಂಡಿತವಾಗಿ ನೆಲೆ ನಿಲ್ಲುತ್ತದೆ ಎನ್ನುವುದಂತೂ ಸತ್ಯ. ಬೇಡಿಕೆ ಇರುವವರೆಗೂ ಸಾಮಗ್ರಿಯ ಪೂರೈಕೆ, ಉತ್ಪಾದನೆ ಸಾಗುತ್ತಲೇ ಇರುತ್ತದೆ. ಆದ್ದರಿಂದ 'ಸೂಳೆ'ಗೆ ಗೌರವದ ಸ್ಥಾನ ಕೊಡಲು ಹೊರಡುವ ನಮ್ಮ ಸಮಾಜದ ಜಾಗೃತ ಧೀಮಂತರು ತಮ್ಮ ವೈಯಕ್ತಿಕ ಸತ್ಯಗಳನ್ನು ಸಾರ್ವತ್ರಿಕ ಸತ್ಯಗಳೆಂದು ಪ್ರಚಾರ ಮಾಡುವುದು ಹುಚ್ಚುತನವೆಂಬುದನ್ನು ಮೊದಲು ತಿಳಿಯಲಿ. ಮೈ ಮಾರಿಕೊಳ್ಳುವ ಹೆಣ್ಣಿಗೆ ಯಾರಿಗೆ ಮಾರಿಕೊಳ್ಳಬೇಕೆಂಬ ಆಯ್ಕೆಯ ಸ್ವಾತಂತ್ರ್ಯವೂ ಇಲ್ಲದಿರುವ ಪರಿಸ್ಥಿತಿಯಿದೆಯೆಂಬುದನ್ನು ಸ್ವಾತಂತ್ರ್ಯದ ಪಕ್ಷಪಾತರು ಮೊದಲು ಗಮನಿಸಲಿ.

ಭೋಗ ನಿರಾಕರಣೆಯನ್ನು ಆದರ್ಶ ಮೌಲ್ಯವೆಂದು ವೈಭವಿಸುವ ನಮ್ಮ ಸಂಸ್ಕೃತಿಯಲ್ಲಿ ಬಟ್ಟೆ ಕಳಚುವಷ್ಟು ಸಲೀಸಾಗಿ ಹೆಂಡತಿಯರನ್ನು / ಹೆಂಗಸರನ್ನು ಬದಲಾಯಿಸಿ ಪುರುಷನು ಗೌರವದಿಂದ ಮೆರೆಯುಲು ಸಾಧ್ಯವಿದೆ. ಆದರೆ ಅದೇ ಸೂಳೆಗಾರಿಕೆಯಿರಲಿ, ಕೇವಲ ಮನಸ್ಸಿನಲ್ಲಿ ಗಂಡನಲ್ಲದೆ ಬೇರೆ ಗಂಡಸನ್ನು ನೆನೆದರೂ 'ಹಾದರ'ವೆನಿಸಿಕೊಳ್ಳಬಹುದಾದ ಆಘಾತ ಹೆಣ್ಣಿಗೆ ಕಾದಿರುವುದು ದುರಂತವೇ ಸರಿ. ತನ್ನ ತಪ್ಪಿಲ್ಲದೆಯೇ ಒಬ್ಬ ಪುರುಷನ ಸ್ಪರ್ಶಕ್ಕೆ ಕಲ್ಲಾಗುವ, ಮತ್ತೊಬ್ಬ ಪುರುಷನ ಸ್ಪರ್ಶದಿಂದ ಮುಕ್ತಿ ಪಡೆಯುವ ಈ ನಮ್ಮ ಸಂಸ್ಕೃತಿಯಲ್ಲಿ ಎಲ್ಲ ಮೌಲ್ಯಗಳು ನಿರ್ಧಾರವಾಗುವುದು ಪುರುಷನ ಕೈಯಲ್ಲಿ.

○ ಎನ್. ಗಾಯಿತ್ರಿ

ಭಾಷೆ, ಸಾಹಿತ್ಯ – ಈ ವಿಷಯಗಳ ಚರ್ಚೆಯಲ್ಲಿ ನೈತಿಕತೆ ಯಾವುದು ? ಇರಬೇಕೆ ? ಎಂಬುದರ ಬಗ್ಗೆ ಕಡ್ಡಿ ಮುರಿದಂತೆ ಇದಮಿತ್ಥಂ ಎಂದು ಹೇಳುವುದು ಖಂಡಿತಕ್ಕೂ ಕಷ್ಟದ ಮಾತೇ ಸರಿ. ಆದರೆ ಬೋಳಿಮಗ, ಸೂಳೆಮಗ, ಮುಂಡೆಮಗ — ಈ ಪದಗಳನ್ನು ಲೀಲಾಜಾಲವಾಗಿ ಬಳಸುವ ಭಾಷೆಯನ್ನು ಹೊಂದಿರುವ ಸಂಸ್ಕೃತಿಯಲ್ಲಿ ಆ ಶಬ್ದಗಳು ವ್ಯಕ್ತಪಡಿಸುವ ಅರ್ಥ ತಳ್ಳಿಹಾಕುವಂತಹುದಲ್ಲ. ಹಾಗೆಯೇ ಶ್ರೀಮಂತ ಭಾಷೆಯ ಶ್ರೀಮಂತ ಪದಕೋಶವೆಂದು ತಲೆಯ ಮೇಲೆತ್ತಿ ಕುಣಿದಾಡುವ

20ನೇ ಪುಟಕ್ಕೆ

ಸ್ತ್ರೀಪರವಾದದ ಅತಿರೇಕಗಳು

ವಿಶ್ವದ ಎಲ್ಲ ಸ್ತ್ರೀಯರಂತೆ ಭಾರತೀಯ ಮಹಿಳೆಯಾದರೂ ಪುರುಷ ಪ್ರಧಾನ ಸಮಾಜದ ಧಬ್ಬಾಳಿಕೆಯಿಂದ ಕುಸಿದಿದ್ದಾಳೆ. ಕುಸಿಯುತ್ತಲೇ ಇದ್ದಾಳೆ, ವ್ಯಕ್ತಿತ್ವವೇ ಇಲ್ಲದ ಬರೀ ನೆರಳಾಗಿದ್ದಾಳೆ ಎಂಬುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಪ್ರಜ್ಞಾವಂತೆಯಾದ ಯಾರೇ ಮಹಿಳೆಯಾದರೂ ಈ ಪರಿಸ್ಥಿತಿಯನ್ನು ಎದುರಿಸಬೇಕು, ವಿರೋಧಿಸಬೇಕು ಎನ್ನುವುದನ್ನು ಒಪ್ಪಲೇಬೇಕು. 'ಅಜ್ಜ ಹಾಕಿದ ಆಲದ ಮರಕ್ಕೆ ನೇಣು ಬಿದ್ದ' ಎನ್ನುವಂತೆ ಹಳೆಯ ಎಲ್ಲ ಸಂಪ್ರದಾಯಗಳೂ ಆದರ್ಶವಾಗಿಯೇ ಇದ್ದವು, ಅದನ್ನು ಅನುಸರಿಸುವುದರಲ್ಲೇ ಸ್ತ್ರೀಕುಲಕ್ಕೆ ಮುಕ್ತಿ ಇದೆ ಎನ್ನುವಂತಹ ಕಂದಾಚಾರದ ವಿಚಾರಗಳನ್ನು ಯಾವ ಪ್ರಜ್ಞಾವಂತ ಮಹಿಳೆಯೂ ಒಪ್ಪಲಾರಳು.

ವಿಚಾರವಂತರ ಪ್ರಬಲ ಅಸ್ತ್ರಗಳಲ್ಲಿ ಲೇಖನಿಯೂ ಒಂದು. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ಅಸಮಾನತೆಗಳಿಗೆ ಕಣ್ಣುಮುಚ್ಚದೆ, ಅವುಗಳನ್ನು ವಿರೋಧಿಸಿ ಆರೋಗ್ಯವಂತ ಸಮಾಜದ ಸೃಷ್ಟಿಗೆ ಕಾರಣರಾಗಬೇಕಾದುದು ಲೇಖನಿಯನ್ನು ಹಿಡಿದವರೆಲ್ಲರ ಕರ್ತವ್ಯ.

ಹಿಂದಿನಿಂದ ಪುರುಷ ತನ್ನ ದೃಷ್ಟಿಯಿಂದಲೇ ರಚಿಸಿದ, ಅವನು ನಿರ್ಧರಿಸಿದ ಮೌಲ್ಯಗಳನ್ನೇ ಒಳಗೊಂಡ ಗ್ರಂಥಗಳನ್ನು ಓದಿ ಓದಿ ಅಭ್ಯಾಸವಾಗಿರುವ ನಮ್ಮ ಲೇಖಕಿಯರೂ ತಮ್ಮ ಕತೆ ಕಾದಂಬರಿಗಳಲ್ಲೂ ಇದೇ ಮೌಲ್ಯಗಳನ್ನು ಎತ್ತಿ ಹಿಡಿದಿರುವುದು ಸ್ಪಷ್ಟವಾಗಿಯೇ ಇದೆ. ಆದರೆ ಇಂತಹ ನಿರಾಶೆಯ ಪರಿಸ್ಥಿತಿಯಲ್ಲೂ ಕೆಲವರಾದರೂ ಲೇಖಕಿಯರು ತಮ್ಮದೇ ರೀತಿಯಲ್ಲಿ ಈ ಮೌಲ್ಯಗಳನ್ನು ಪ್ರಶ್ನಿಸಿದ್ದಾರೆ ಎನ್ನುವುದೂ ಅಷ್ಟೇ ನಿಜ. ಈ ಶತಮಾನದ ಏಳನೆಯ ದಶಕದ ನಂತರವಂತೂ ಇಂತಹ ಸವಾಲುಗಳನ್ನು ಎಸೆಯುವ ಅನೇಕ ಸಮರ್ಥ ಲೇಖಕಿಯರು ಹೆಚ್ಚು ಹೆಚ್ಚಾಗಿ ಬರೆಯುತ್ತಿರುವುದು ಸ್ವಾಗತಾರ್ಹ.

ಆದರೆ ಇತ್ತೀಚಿನ ಕೆಲವು ಬರವಣಿಗೆಯನ್ನು ಗಮನಿಸಿದಾಗ ನಮ್ಮ ಲೇಖಕಿಯರ ಕೆಲವು ಕೃತಿಗಳಲ್ಲಿ ಈ ಸ್ತ್ರೀಪರವಾದ ಅತಿರೇಕವನ್ನು ಮುಟ್ಟುತ್ತಿವೆಯೇನೋ ಎನ್ನುವ ಅನುಮಾನ ಬರುತ್ತಿದೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಲು ಇಷ್ಟಪಡುತ್ತೇನೆ. ಪುರುಷ ಪ್ರಧಾನ ಸಮಾಜ ಬೇರೆ, ದಿನನಿತ್ಯ ನಮ್ಮ ಸಂಪರ್ಕಕ್ಕೆ ಬರುವ, ತಂದೆಯಾಗಿ, ಸೋದರನಾಗಿ, ಪತಿಯಾಗಿ, ಪುತ್ರನಾಗಿ, ಸ್ನೇಹಿತನಾಗಿ ನಮ್ಮ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಪುರುಷರು ಬೇರೆ ಎಂಬುದನ್ನು ನಾವೆಂದೂ ಮರೆಯಬಾರದು. ಸ್ತ್ರೀಪರವಾದ ಎಂದರೆ ಪುರುಷ ದ್ವೇಷವಲ್ಲ. ಅಷ್ಟೇ ಅಲ್ಲ, ಪುರುಷ ಪ್ರಧಾನ ಸಮಾಜದಲ್ಲಿ ಅದೇ ನಂಬಿಕೆಗಳನ್ನು ಮೈಗೂಡಿಸಿಕೊಂಡಿರುವ ಸ್ತ್ರೀಯರೂ ಇದ್ದಾರೆ ಎಂಬುದನ್ನೂ ನಾವು ಮರೆಯುವಂತಿಲ್ಲ. ಇಂಥ ಸ್ತ್ರೀಯರೇ ಬೇರೆ ಸ್ತ್ರೀಯರ ಅನೇಕ ಸಮಸ್ಯೆಗಳಿಗೆ ಪುರುಷರಷ್ಟೇ, ಕೆಲವೊಮ್ಮೆ ಅವರಿಗಿಂತ ಹೆಚ್ಚಾಗಿ ಕಾರಣರಾಗುತ್ತಿದ್ದಾರೆ ಎನ್ನುವುದು ಕಟುಸತ್ಯ. ಇದಕ್ಕೆ ವಿರೋಧವಾಗಿ ಉದಾರ ಸ್ವಭಾವದ ಅನೇಕ ಪುರುಷರು ಸ್ತ್ರೀಪರವಾದಿಗಳಾಗಿ ಅವರ ಏಳಿಗೆಗಾಗಿ ದುಡಿದಿದ್ದಾರೆ, ದುಡಿಯುತ್ತಿದ್ದಾರೆ ಎನ್ನುವುದೂ ಅಷ್ಟೇ ಸತ್ಯ. ನಮ್ಮ ಲೇಖಕಿಯರ ಕೆಲವೊಂದು ರಚನೆಗಳನ್ನು ಓದಿದಾಗ ಈ ವಿಚಾರ ಪದೇಪದೇ ನನ್ನನ್ನು ಕಾಡುತ್ತದೆ. ತಮ್ಮ ನಿಜ ಜೀವನದಲ್ಲಿ ಅವರು ಪುರುಷನನ್ನು ದ್ವೇಷಿಸುತ್ತಾರೋ ಇಲ್ಲವೋ ತಿಳಿಯದು. ಅವರ ಕೃತಿಗಳಲ್ಲಂತೂ ಈ ಪುರುಷ ದ್ವೇಷ ಹಾಗೂ ಸ್ತ್ರೀಯ ಎಲ್ಲ ಸಮಸ್ಯೆಗಳಿಗೂ ಪುರುಷನೇ ಕಾರಣ ಎನ್ನುವ ನಂಬಿಕೆ ತಾನೇತಾನಾಗಿ ಮೆರೆದಿದೆ. ಈ ಮಾತಿಗೆ ಇಲ್ಲಿ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡಲೆತ್ನಿಸುತ್ತೇನೆ.

ಶ್ರೀಮತಿ ಗೀತಾ ನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು' ಅನೇಕ ಕಾರಣದಿಂದ ಇತ್ತೀಚಿನ ದಿನಗಳಲ್ಲಿ ಓದುಗರ ಮತ್ತು ವಿಮರ್ಶಕರ ಗಮನ ಸೆಳೆದ

ಕಾದಂಬರಿ. ಉತ್ತರ ಕರ್ನಾಟಕದ ಶಕ್ತಿಶಾಲೀ ಭಾಷೆಯಲ್ಲಿ ಅತಿ ಹಿಂದುಳಿದಿರುವ ಬಾಯಿಸತ್ತ ಜನರ ಕತೆಯನ್ನು ಹೇಳಿದ್ದು ಈ ಕಾದಂಬರಿಯ ವೈಶಿಷ್ಟ್ಯ. 'ಲಚ್ಚಿ ಕಾದಂಬರಿಯ ನಾಯಕಿ ತಾರುಣ್ಯದಲ್ಲಿ ಕಂಡ ಸಾವಿರ ಕನಸುಗಳಲ್ಲಿ ಒಂದೂ ನಿಜವಾಗದೆ, ಪುರುಷನ ಕಾಮ ದೃಷ್ಟಿಗೆ ಸಿಕ್ಕು ನೊಂದು ಬೆಂದ ಜೀವ ಅವಳದು. ಬರ ಬರುತ್ತ ಗಂಡಸೆಂದರೆ ಅಸಹ್ಯ ಪಡುವ ಸ್ಥಿತಿಗೆ ಬಂದವಳು. ಕೊನೆಗೊಮ್ಮೆ ತಾನು ಹೆತ್ತ ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದಾಗ ಪೋಲೀಸರ ಕೈಗೆ ಸಿಕ್ಕು ಜೈಲು ಸೇರಿದವಳು. ಅವಳಂತಹ ಅಸಹಾಯಕ ಹೆಣ್ಣು ಮತ್ತೇನು ತಾನೇ ಮಾಡಬಹುದಾಗಿತ್ತು ಎನ್ನಿಸು ವುದು ಸಹಜವೇ.

ಆದರೆ ತನ್ನ ಮಗ ಹುಟ್ಟಿದ ಗಳಿಗೆಯಲ್ಲಿ ಲಚ್ಚಿಯ ಮನಸ್ಸಿನಲ್ಲಿ ಬಂದ ಭಾವನೆಗಳ ಚಿತ್ರಣವನ್ನು ಓದಿ ದಾಗ ಮೈ ನಡುಗುತ್ತದೆ.

ಲೇಬರ್ ವಾರ್ಡಿನ ಒಂದು ಮಂಚದ ಮೇಲೆ ಮಲಗಿದ್ದ ಲಚ್ಚಿಯ ಕಣ್ಣಮುಂದೆ ಕಲ್ಪನೆ-ಚಿತ್ರ ಬಿಡಿಸುತ್ತಿತ್ತು.

—ನಾಳೆ ಬಸ್ಸೆಣ್ಣಿಯ ಮಗು ದೊಡ್ಡವನಾಗುತ್ತಾನೆ. ಬೆಳೆಯುತ್ತ ಬೆಳೆಯುತ್ತ ಗಟ್ಟಿಯಾದ ಗಂಡನಾಗುತ್ತಾನೆ. ಸುತ್ತಮುತ್ತ ಸಂಪರ್ಕಕ್ಕೆ ಬಂದ ಹರೆಯದ ಹೆಣ್ಣುಗಳ ಮೇಲೆ ಅತ್ಯಾಚಾರವೆಸಗಿ ಅವರ ಬಾಳನ್ನು ಬಲಿ ತೆಗೆದು ಕೊಳ್ಳುತ್ತಾನೆ: ಆಗ....ಆಗ....ಆ ಬಡ ಹೆಣ್ಣು ಇವನ ಹೆಸರಿನ ಮೇಲೆ ಕಣ್ಣೀರುಗರೆಯುತ್ತ ಹಿಡಿ ಶಾಪ ಹಾಕುತ್ತಾಳೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಇಂತಹ ಗಂಡಸೇ ಆಗಬೇಕೇ?....ಅದಕ್ಕೇನು? ಎಲ್ಲ ಗಂಡಸರೂ ಹೀಗೇನೇ ಆಗೋದು....ಗಂಡು ಎಂದರೆ ಇನ್ನೇನು?...."

ನಾಳಿಗೆ ತನ್ನ ಮಗಾನೂ ಹಂತಾ ಗಂಡಸೇ ಆಗ್ತಾನ. ಆದರೆ ನನ್ ಮಗಾ ಹಂಗಾಗಬಾರ್ದು. ಅನಾಯಕ ಹಳ್ಳಿ ಹೆಂಗಸರಿಗೆ ಕೆಡ್ಸಿ ಆಕೆಯ ಬಾಳ್ಯಾಕೆ ಬೆಂಕಿಯಿಡೋ ಜೋಕುಮಾರನ್ಹಂಗ ಆಗಬಾರ್ದು ನನ್ ಮಗಾ....

'ಆದರ....ಗಂಡ್ಸಾದ ಮ್ಯಾಲ ಇಡೆಲ್ಲ ಆಗಬಾರ್ದು ಅಂದ್ರ ಹ್ಯಾಂಗಾತ್ತದ? ಗಂಡು ಜಾತಿ ಹುಟ್ಟಿರಾದೇ ಹೆಂಗಸರ ಕುತಗಿ ಕುಯ್ಯದ್ದು ತೀರಿಪಿ ನಾಟಕಾ ಆಡಿ, ಆಕಿನ ಎದ್ಯಾಗ ಛಾಕು ಚುಚ್ಚಿ ಹಸೀ ರಗತ ಹೀರಿ ಕುಡಿಲಕ್ಕ.... ಗಂಡಸರಿಂದ ಖರೇ ಪಿರೀತಿ ಬೇಡಾದೂ ಹುಲಿ ಮುಂದೆ ನಿಂತು ಜೀವದ ಭಿಕಶ್ಯಾ ಬೇಡಾದೂ ಒಂದೇ ಆದಾ....

....'ಆದರೆ ಈ ಕೂಸಗಿ ಏನು ಮಾಡ್ಬೇಕು? ಇದರ ಕುತಗಿ ಹಿಚಕಿ ಸತ್ತು ಹೊಡ್ದು ಎಲ್ಲರೆ ಬಿಸಾಟದರ ಹ್ಯಾಂಗ?....'

ಆತ್ಮಹತ್ಯೆಯ ಆಪಾದನೆಗೆ ಗುರಿಯಾಗಿ ಕೋರ್ಟಿನ ಕಟಕಟೆ ಹತ್ತಿದಳು ಲಚ್ಚಿ.

'ನೀ ಯಾಕ ಆ ಕೂಸಿಗೆ ಕೊಲ್ಲಬೇಕಂತ ಮಾಡಿದ್ದೀ?' —ವಕೀಲರ ಪ್ರಶ್ನೆ. ಅದಕ್ಕೆ ಲಚ್ಚಿಯ ಉತ್ತರ:

"ಯಾಕಂದ್ರ....ಯಾಕಂದ್ರ....ಅದರ ಅಪ್ಪ ಅದಕ ತಂದೆಂತ ತಗೋಳಿಲ್ರೀ .... ನ್ಯಾಲಾಗಿ ಅದು ಗಂಡಸ ಮಗಾ ಇತ್ತು. ನಾಳಿಗೆ ದೊಡ್ಡದಾಗಿ ಸಾವಿರ ಹೆಂಗಸರ ಬಾಳ್ಯಾ ಹಾಳಮಾಡಿ ಅವರ ಬದುಕಿಗೆ ಬೆಂಕಿ ಹಚ್ಚಾ ಗಂಡ ಮಗಾ....ಅದಕ....ಅದಕ್ಕನೂ ಕೊಲ್ಲಿ ನಾನೂ ಸಾಯ್ಬೋಕಂತ ಮಾಡಿದ್ದೇನ್ರಿ...."

ಒಬ್ಬ ಹೆಂಗಸು ಗಂಡಸಿಂದ ಎಂಥ ಬವಣೆಯನ್ನೇ ಪಟ್ಟರಲಿ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು ಗಂಡು ಎನ್ನುವ ಕಾರಣಕ್ಕಾಗಿ ಅದನ್ನು ಕೊಲ್ಲಲು ಮನಸ್ಸು ಮಾಡುವುದು, ಯಾವ ಗಂಡು ಮಗುವಿನ ತಾಯಿಯೂ ಒಪ್ಪದ ಮಾತು.

ಇನ್ನೊಂದು ಉದಾಹರಣೆಗೆ 'ಕೆರೆಗೆ ಹಾರ' ಈ ಸುಪ್ರ ಸಿದ್ಧ ಜನಪದ ಕಥೆ ಎಲ್ಲರಿಗೂ ಚಿರಪರಿಚಿತವಾದದ್ದೇ, ಹೃದಯಸ್ಪರ್ಶಿಯಾದ ಕತೆಯಂತೆಯೇ ಇದರಲ್ಲಿನ ಸಾಹಿತ್ಯಿಕ ಗುಣವೂ ಅನೇಕ ವರ್ಷಗಳಿಂದ ಪಂಡಿತ ಪಾಮರರಿಬ್ಬರನ್ನೂ ಆಕರ್ಷಿಸುತ್ತಿದೆ. ಒಂದು ಊರಿನಲ್ಲಿ ನೀರಿನ ಅಭಾವ ಕೊನೆಗೊಳಿಸಲು ಕೆರೆಯನ್ನು ಕಟ್ಟಲಾಗು ತ್ತದೆ. ಎಷ್ಟು ಆಳವಾಗಿ ಅಗೆದರೂ ಕೆರೆಯಲ್ಲಿ ನೀರು ಕಾಣುವುದಿಲ್ಲ. ಊರಿನ ಯಜಮಾನ ಶಾಸ್ತ್ರ ಕೇಳುತ್ತಾನೆ. ಮನೆಯ ಸೊಸೆಯನ್ನು ಬಲಿಕೊಟ್ಟರೆ ಕೆರೆಯ ನೀರು ಕಾಣುತ್ತದೆ ಎಂದು ಶಾಸ್ತ್ರ ಹೇಳುತ್ತದೆ. ಆದರಂತೆ ಕಿರಿಯ ಸೊಸೆಯನ್ನು ಅವಳ ಗಂಡ ಊರಲ್ಲಿ ಇಲ್ಲದ ಸಮಯದಲ್ಲಿ ಅತ್ತೆ ಮಾವ ಕೆರೆಗೆ ಬಲಿ ಕೊಡುತ್ತಾರೆ.

ಇವಿಷ್ಟು ಪರಂಪರೆಯಿಂದ ಬಂದಿರುವ ಕತೆ. ಈ ಕತೆಯಲ್ಲಿ ಹಾಗೂ ಇಂಥದೇ ಅನೇಕ ಕಥೆಗಳಲ್ಲಿ ಕೋಟೆ ನಿಲ್ಲದಿದ್ದರೆ, ಕೆರೆ ಬಾವಿಗಳಲ್ಲಿ ನೀರು ಬರದಿದ್ದರೆ ಸ್ತ್ರೀಯನ್ನು ಅದರಲ್ಲೂ ಮನೆಯ ಸೊಸೆಯನ್ನು ಬಲಿಕೊಡಬೇಕೆನ್ನುವ ದುಷ್ಟಪದ್ಧತಿ ನಮ್ಮಲ್ಲಿ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

ಸ್ತ್ರೀಹತ್ಯೆಯ ಇನ್ನೊಂದು ಮುಖವಾದ ಈ ಮೂಢನಂಬಿಕೆಯನ್ನು ಯಾರೇ ಆದರೂ ಖಂಡಿಸಲೇಬೇಕು. ಆದರೆ, ಕನ್ನಡ ರಂಗಭೂಮಿಯ ಪ್ರತಿಭಾವಂತ ನಿರ್ದೇಶಕಿ ಹಾಗೂ ನಾಟಕಕರ್ತೆಯಾದ ಎಸ್. ಮಾಲತಿ ಈ ನಾಟಕದ ಕೊನೆಯನ್ನು ಬದಲಾಯಿಸಿರುವುದು ಮಾತ್ರ ಕತೆಗೆ ಯಾವ ರೀತಿಯ ನ್ಯಾಯವನ್ನೂ ಮಾಡುವುದಿಲ್ಲ. ಮೂಲ ಕತೆಯಲ್ಲಿ ಗಂಡ ಮಾದೇವರಾಯ ಯುದ್ಧ ಮಾಡಲೆಂದು ಹೋಗಿರುತ್ತಾನೆ. ಅಲ್ಲಿ ಕೆಟ್ಟ ಕನಸನ್ನು ಕಾಣುತ್ತಾನೆ. 'ಶಲ್ಯ ಸುಟ್ಟಂಗಾತು ಧೋತ್ರ ಹರಿದಂಗಾತು. ಕಟ್ಟಿಸಿದ ಮಾಡಿ ಮನೆ ತಟ್ಟನೇ ಉರುಳಿದಂಗಾಯ್ತು.' ಇಂತಹ ದುಶ್ಶಕುನದಿಂದ ಕಳವಳಗೊಂಡ ಮಾದೇವ ಅದೇ ಕ್ಷಣ ಊರಿಗೆ ಹಿಂತಿರುಗಿ ಬರುತ್ತಾನೆ. 'ಬೆತ್ತಲೆ ಕುದುರಿ ಏರಿ' ಹೊರಡುತ್ತಾನೆ ಎನ್ನುವ ಮಾತಿನಲ್ಲಿ ಅವನ ಮನಸ್ಸಿನ ಕಾತರ, ಆತುರ, ಸ್ಪಷ್ಟವಾಗುತ್ತದೆ. ಊರಿಗೆ ಬಂದವನು ಹೆಂಡತಿ ಭಾಗೀರಥಿಯನ್ನು ಕಾಣದೆ ಪರದಾಡುತ್ತಾನೆ. ಮನೆಯವರ್‍ಯಾರೂ ನಿಜ ಸಂಗತಿಯನ್ನು ಅವನಿಗೆ ತಿಳಿಸುವುದಿಲ್ಲ. ಹೆಂಡತಿಯ ಗೆಳತಿಯಿಂದ ನಡೆದದ್ದೇನು ಎನ್ನುವುದು ತಿಳಿಯುತ್ತದೆ. ಕೆರೆಯ ದಂಡೆಗೆ ಬಂದು ವಿವಿಧ ರೀತಿಯಲ್ಲಿ ಹೆಂಡತಿಯನ್ನು ನೆನೆಸಿಕೊಂಡು ಗೋಳಾಡುತ್ತಾನೆ. 'ಸಾವಿರ ಕೊಟ್ಟರೂ ನಿನ್ನಂತಹ ಹೆಂಡತಿ ಸಿಗುವುದಿಲ್ಲ' ಎಂದು ಮರುಗುತ್ತಾನೆ. ಕೊನೆಗೆ ದುಃಖವನ್ನು ತಾಳಲಾರದೆ ತಾನೂ ಅದೇ ಕೆರೆಗೆ ಹಾರಿಕೊಳ್ಳುತ್ತಾನೆ.

ಮೂಲದ ಈ ಕೊನೆ 'ಕೆರೆಗೆ ಹಾರ'ದ ಇಡೀ ಪ್ರಸಂಗವನ್ನು ಒಂದು ಪ್ರೇಮಕಥೆಯನ್ನಾಗಿ ಮಾರ್ಪಡಿಸಿಬಿಡುತ್ತದೆ.

ಆದರೆ ಮಾಲತಿಯವರು ಕಥೆಯ ಈ ಸುಂದರ ಮುಕ್ತಾಯವನ್ನೇ ಬದಲಾಯಿಸಿಬಿಟ್ಟಿದ್ದಾರೆ. ಹೃದಯಸ್ಪರ್ಶಿಯಾದ ದುರಂತ ಪ್ರೇಮಕಥೆಯೊಂದನ್ನು ವಿರೂಪಗೊಳಿಸಿದ್ದಾರೆ. ಅವರ ಕಲ್ಪನೆಯ ಅಂತ್ಯ ಹೀಗಿದೆ : ಅಳುತ್ತಾ ಕೆರೆಯ ಪಕ್ಕ ಕುಳಿತಿದ್ದ ಮಾದೇವನ ಬಳಿ ಅವನ ತಂದೆ ಬರುತ್ತಾನೆ. "ಭಾಗೀರಥಿ ಸತ್ತರೆ ಏನು ಮಹಾ ನಷ್ಟವಾದದ್ದು ! ನಿನಗೆ ಇನ್ನೊಂದು ಹೆಣ್ಣನ್ನು ತಂದು ಮದುವೆ ಮಾಡುತ್ತೇನೆ" ಎಂದು ಸಮಾಧಾನ ಪಡಿಸಿ ಮಾದೇವನನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಈ ದೃಷ್ಟಿಯಿಂದ ನೋಡುವುದಾದರೆ ಇದುವರೆಗೆ ಪ್ರಪಂಚದ ಯಾವ ಪುರುಷನೂ ಯಾವ ಹೆಣ್ಣನ್ನೂ ಮನಃಪೂರ್ವಕವಾಗಿ ಪ್ರೀತಿಸಿಯೇ ಇಲ್ಲ ಎನ್ನುವ ನಿಷ್ಕರ್ಷಕ್ಕೆ ತಲುಪಬೇಕಾಗುತ್ತದೆ. ವಿಶ್ವದ ಎಲ್ಲ ಪ್ರೇಮಕಥೆಗಳನ್ನೂ ಸುಟ್ಟು ಬೂದಿಮಾಡಬೇಕಾಗುತ್ತದೆ.

ಹೀಗೆಯೇ ಪೌರಾಣಿಕ ಕಥೆಗಳನ್ನು ಆಯ್ದುಕೊಂಡು ಅದರಲ್ಲಿನ ಸ್ತ್ರೀ ಶೋಷಣೆಯನ್ನು ಎತ್ತಿ ಹಿಡಿಯುವಾಗಲೂ ತುಂಬಾ ಆಲೋಚಿಸಬೇಕಾಗುತ್ತದೆ. ಹಿಂದಿನ ಅನೇಕ ಪದ್ಧತಿಗಳು ಸ್ತ್ರೀ ವ್ಯಕ್ತಿತ್ವದ ವಿಕಾಸಕ್ಕೆ ಮಾರಕವಾಗಿವೆ ಎಂಬುದೂ ನಿಜವೇ ? ಆದರೆ, ಅಲ್ಲಿ ಬರುವ ಅನೇಕ ಸಮಸ್ಯೆಗಳು ಕೇವಲ ಮಹಿಳೆಗೆ ಮಾತ್ರ ಸಂಬಂಧಿಸಿದ್ದು ಆಗಿರದೆ ಆ ಕಾಲದ ನಂಬಿಕೆಯ ಸಮಸ್ಯೆ ಆಗಿತ್ತು ಎನ್ನುವುದನ್ನು ನಾವು ಮರೆಯಬಾರದು. ಮನೆಗೆ ಯಜಮಾನ ಎನ್ನಿಸಿಕೊಂಡವನು ಕೇವಲ ತನ್ನ ಹೆಣ್ಣು ಮಕ್ಕಳನ್ನು ಮಾತ್ರವಲ್ಲದೆ ತನ್ನ ಗಂಡು ಮಕ್ಕಳನ್ನೂ ದಾನವಾಗಿ ಕೊಡುತ್ತಿದ್ದ ಎನ್ನುವುದಕ್ಕೆ ಶುನಶ್ಯೇಫನ ಕಥೆಯೇ ಸಾಕ್ಷಿ (ಒಬ್ಬ ಮನುಷ್ಯನನ್ನು ಇನ್ನೊಬ್ಬರಿಗೆ ದಾನ ಮಾಡುವ ಹಕ್ಕು ಯಾರಿಗೂ ಇಲ್ಲ ಎನ್ನುವ ವಾದವನ್ನು ಬೇಕಾದರೆ ನಾವು ಸಮರ್ಥಿಸೋಣ) ಹೀಗೆಯೇ ಹರಿಶ್ಚಂದ್ರ ಸತ್ಯಕ್ಕಾಗಿ ತನ್ನ ಹೆಂಡತಿಯನ್ನು ಮಾರಿದಂತೆಯೇ ತನ್ನನ್ನು ತಾನೇ ಮಾರಿಕೊಂಡ. ಇಂಥ ಕಥೆಗಳನ್ನು ಅಕ್ಷರಶಃ ನಂಬುವುದು ಎಷ್ಟರ ಮಟ್ಟಿಗೆ ಸರಿ: ಇವುಗಳಲ್ಲಿ ಆದರ್ಶದ ವೈಭವೀಕರಣಕ್ಕಾಗಿ ಸೃಷ್ಟಿತವಾದ ಕಥೆಗಳು ಎಷ್ಟು, ಎಂಬುದನ್ನೂ ನಾವು ವಿಶ್ಲೇಷಿಸಬೇಕಾಗುತ್ತದೆ.

ಇನ್ನೊಂದು ವಿಚಾರ ಪೌರಾಣಿಕ ಕಥೆಗಳನ್ನು ಆರಿಸಿಕೊಂಡಾಗಲೆಲ್ಲ ಅಲ್ಲಿ ಸ್ತ್ರೀ ಶೋಷಣೆಯನ್ನಷ್ಟೇ ನೋಡದೆ, ಅವುಗಳಲ್ಲಿರುವ ಉಜ್ವಲ ಪಕ್ಷವನ್ನೂ ಗಮನಿಸಬೇಕಾದುದು ಆರೋಗ್ಯಕರವಾದ ಮನೋಭಾವನೆ ಎಂದು ನನಗನ್ನಿಸುತ್ತದೆ. ಈ ಸಂದರ್ಭದಲ್ಲಿ ಮಹಾಭಾರತದ

ಆದಿಪರ್ವದಲ್ಲಿ ಕಥಿತವಾಗಿರುವ ರುರು - ಪ್ರಮದ್ವತಿಯ ಪ್ರಸಂಗ ನೆನಪಿಗೆ ಬರುತ್ತಿದೆ.

ಪ್ರಮತಿ ಮತ್ತು ಘೃತಾಚಿಯ ಮಗ ರುರು. ಸ್ಥೂಲಕೇಶಿ ಎಂಬ ಋಷಿಯ ಸಾಕು ಮಗಳು ಪ್ರಮದ್ವರೆ. ಪ್ರಮದ್ವರೆಯನ್ನು ಕಂಡ ಕೂಡಲೇ ರುರು ಅವಳನ್ನು ಮೋಹಿಸುತ್ತಾನೆ. ಹಿರಿಯರೂ ಮದುವೆಗೆ ಒಪ್ಪುತ್ತಾರೆ. ಮುಂದೆ ಒಂದು ಶುಭಲಗ್ನದಲ್ಲಿ ವಿವಾಹವೂ ನಿಶ್ಚಯವಾಗುತ್ತದೆ. ಒಂದು ದಿನ ಸಖಿಯರೊಂದಿಗೆ ಪ್ರಮದ್ವರೆ ಕಾಡಿನಲ್ಲಿ ಆಟವಾಡುತ್ತಿದ್ದಾಗ, ಕಾಣದೆ ಸರ್ಪವೊಂದನ್ನು ತುಳಿದುಬಿಡುತ್ತಾಳೆ. ಕೋಪಗೊಂಡ ಸರ್ಪ ಅವಳನ್ನು ಕಡಿದುಬಿಡುತ್ತದೆ. ಕ್ಷಣ ಮಾತ್ರದಲ್ಲಿ ಪ್ರಮದ್ವರೆ ಸತ್ತು ಬೀಳುತ್ತಾಳೆ. ಸುದ್ದಿ ತಿಳಿದ ರುರು ದುಃಖವನ್ನು ತಾಳಲಾರದೆ ಗೋಳಾಡುತ್ತಾನೆ. 'ತಾನೇನಾದರೂ ಪುಣ್ಯ ಮಾಡಿದ್ದರೆ ಪ್ರಮದ್ವರೆ ಬದುಕಲಿ' ಎಂದು ದೇವತೆಗಳಲ್ಲಿ ಮೊರೆಯಿಡುತ್ತಾನೆ. ದೇವತೆಗಳು ಕಳುಹಿಸಿದ ದೇವದೂತ ರುರುವಿನ ಬಳಿ ಬಂದು ಋಷಿ ಪುತ್ರ ನಿನ್ನ ಜೀವಿತದ ಅರ್ಧಾಯುಷ್ಯವನ್ನು ಕೇಳುವುದಾಧರೆ ಮಾತ್ರ ಪ್ರಮದ್ವರೆ ಬದುಕುತ್ತಾಳೆ ಎನ್ನುತ್ತಾನೆ.

ರುರು ಬಹಳ ಸಂತೋಷದಿಂದ, ಉಳಿದಿದ್ದ ತನ್ನ ಆಯುಷ್ಯದಲ್ಲಿ ಅರ್ಧವನ್ನು ಪ್ರಮದ್ವರೆಗೆ ಕೊಟ್ಟು ಅವಳನ್ನು ಬದುಕಿಸಿಕೊಳ್ಳುತ್ತಾನೆ. ಮುಂದೆ ಅವರು ಮದುವೆಯಾಗಿ ಬಹುಕಾಲ ಸುಖದಿಂದಿರುತ್ತಾರೆ.

ಸಾವಿತ್ರಿ ಯಮನಿಂದ ತನ್ನ ಗಂಡನ ಪ್ರಾಣವನ್ನು ವರವಾಗಿ ಪಡೆದರೆ, ರುರು ತನ್ನ ಆಯುಷ್ಯದಲ್ಲೇ ಅರ್ಧವನ್ನು ಕೊಟ್ಟು ತನ್ನ ಪ್ರೇಯಸಿಯನ್ನು ಉಳಿಸಿಕೊಂಡ. ಸ್ತ್ರೀ ಪರವಾದಿಗಳು ಇಂತಹ ಕಥೆಗಳ ಬಗ್ಗೆಯೂ ಆಲೋಚಿಸಬಹುದಲ್ಲವೇ ?

ಆದ್ದರಿಂದ ನಾನು ಹೇಳಲು ಇಷ್ಟಪಡುವುದಿಷ್ಟೆ, ಪುರುಷ ಪ್ರಧಾನ ಸಮಾಜವನ್ನು ವಿರೋಧಿಸೋಣ, ಬಹಿಷ್ಕರಿಸೋಣ. ಆದರೆ ಪುರುಷದ್ವೇಷವನ್ನು ಪುರಸ್ಕರಿಸಿ ಸಮಾಜದ ಅಸಮತೋಲನವನ್ನು ಹೆಚ್ಚಿಸುವುದು ಬೇಡ.

— ಎಚ್. ಎಸ್. ಪಾರ್ವತಿ

ಅಮಾನವೀಯ ಪ್ರಕರಣಗಳು

ವರದಿ : ಹೆಚ್. ಆರ್. ರಾಜೇಶ್ವರಿ

ಮಹಿಳೆಯರು ಇಂದು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಇಂತಹ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಮೈಸೂರಿನ ಸಮತಾ ವೇದಿಕೆ ಮಹಿಳೆಯರ ಮೇಲಾಗುತ್ತಿರುವ ಅವ್ಯಾಹತ ದೌರ್ಜನ್ಯಗಳ, ಅನ್ಯಾಯಗಳ ವಿರುದ್ಧ ಧ್ವನಿಯೆತ್ತಿ ಸೆಣಸುತ್ತಿದೆ. ಈ ದಿಸೆಯಲ್ಲಿ ಇತ್ತೀಚಿಗೆ ಸಮತಾ ಕೈಗೆತ್ತಿಕೊಂಡ ಎರಡು ಪ್ರಕರಣಗಳ ಕಿರು ಪರಿಚಯ ಇಲ್ಲಿದೆ.

1. ಅತ್ಯಾಚಾರ ಪ್ರಕರಣ :

ಮೈಸೂರಿನ ವಿ. ವಿ. ಪುರಂನಲ್ಲಿರುವ ಮಾತೃ ಮಂಡಳಿಯಲ್ಲಿ 9 ನೇ ತರಗತಿ ಓದುತ್ತಿರುವ ಹುಡುಗಿ ಸೌಭಾಗ್ಯ. 14 ವರ್ಷದ ಈ ಹುಡುಗಿಯನ್ನು ಆಕೆ ಶಾಲೆಯ ಹತ್ತಿರದಲ್ಲೇ ಇರುವ ಹಾಸ್ಟೆಲ್‌ಗೆ ಮರಳುತ್ತಿದ್ದಾಗ ದಿನಾಂಕ 24-2-90 ರಂದು ಕೆಲವು ಕಿಡಿಗೇಡಿಗಳು ಅಪಹರಿಸಿದರು. ನಂತರ ಇವಳನ್ನು ಮೂರು ದಿನಗಳ ಕಾಲ ಪಾನಮತ್ತಳನ್ನಾಗಿ ಮಾಡಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿಸಿದ್ದಾರೆ. ದಿನಾಂಕ 26-2-90 ರಂದು ಅರೆಪ್ರಜ್ಞಾವಸ್ಥೆಯಲ್ಲಿ ಹಾಸ್ಟೆಲ್ ಬಳಿ ಇದ್ದ ಇವಳನ್ನು ವಾರ್ಡನ್ ಕೆ. ಆರ್. ಆಸ್ಪತ್ರೆಗೆ ದಾಖಲು ಮಾಡಿದ್ದರು. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಇವಳನ್ನು ಸಮತಾದವರು ವಿಚಾರಿಸಲು ಹೋಗಿದ್ದಾಗ ಕುಡಿತದ ಅಮಲು ಹಾಗೂ ದೈಹಿಕ ಆಕ್ರಮಣಕ್ಕೆ ಒಳಗಾದ ಆಘಾತದಿಂದಾಗಿ ತನಗಾದ ಅನ್ಯಾಯದ ಬಗ್ಗೆ ಹೇಳಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಟ್ರಿಬಲ್ ಎಕ್ಸ್, ಆಂದೋಲನ ಪತ್ರಿಕೆ ಕಾರಿನ ನಂಬರು ಹಾಗೂ ಅತ್ಯಾಚಾರವೆಸಗಿದ ಪಾಪಿಗಳ ಹೆಸರುಗಳನ್ನು ಬಡಬಡಿಸುತ್ತಿದ್ದಳು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮತಾ ಆಸ್ಪತ್ರೆಯ ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಿ ಕೂಡಲೇ ಹುಡುಗಿಯನ್ನು ವೈದ್ಯಕೀಯ ತಪಾಸಣೆಗೊಳಪಡಿಸುವಂತೆ ಆಗ್ರಹಪಡಿಸಿತು. ಅಪರಾಧಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆಗೊಳಪಡಿಸುವಂತೆ ಸಂಬಂಧಿಸಿದ ಪೋಲೀಸು ಅಧಿಕಾರಿಗಳನ್ನು ಸಂಪರ್ಕಿಸಿತು. ಈಗ ಅಪರಾಧಿಗಳಾದ ನಾಲ್ಕು ಜನ ಯುವಕರನ್ನು ಪೋಲೀಸರು ಬಂಧಿಸಿದ್ದಾರೆ.

ಇಷ್ಟೇ ಅಲ್ಲದೆ ಸಮಾಜ ಮತ್ತು ಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಹಿಂದುಳಿದ ವರ್ಗದ ಈ ಹಾಸ್ಟೆಲ್‌ನ ಅವ್ಯವಸ್ಥೆ ಹಾಗೂ ಹಾಸ್ಟೆಲ್‌ನ ನಿರ್ಲಕ್ಷ್ಯವನ್ನು ಪ್ರಶ್ನಿಸಿ ಕರಪತ್ರವೊಂದನ್ನು ಹಂಚಿ ದಿನಾಂಕ 3-3-90 ರಂದು ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿತು. ಪೂರ್ಣಾವಧಿ ವಾರ್ಡನ್‌ರವರನ್ನು ನೇಮಿಸುವ, ಹಾಸ್ಟೆಲ್ ವ್ಯವಸ್ಥೆಯನ್ನು ಸರಿಪಡಿಸಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸುವ ಹಾಗೂ ವಿದ್ಯಾರ್ಥಿ ವೇತನವನ್ನು ಹೆಚ್ಚಿಸುವ ಬೇಡಿಕೆಯನ್ನು ಈ ಸಮಯದಲ್ಲಿ ಮುಂದಿಡಲಾಗಿತ್ತು.

2. ವರದಕ್ಷಿಣೆ ಸಾವು :

ದಿನಾಂಕ 9-2-1989 ರಂದು ಶ್ರೀರಂಗಪಟ್ಟಣದ ಹಣ್ಣಿನ ವ್ಯಾಪಾರಿ ಖೈಸರ್ ಪಾಷಾನೊಂದಿಗೆ ವಿವಾಹವಾಗಿದ್ದ ರಫಿಯಾಬಾನು ದಿನಾಂಕ 5-3-90 ರಂದು ಗಂಡನ ಹಣದಾಸೆಗೆ ಅಮಾನುಷ ರೀತಿಯಲ್ಲಿ ಬಲಿಯಾದಳು. ಮದುವೆ ಸಮಯದಲ್ಲಿ 15 ಸಾವಿರ ರೂ. ಗಳನ್ನು ಪಡೆದು 10 ಸಾವಿರ ರೂ. ಗಳಿಗಾಗಿ ಖೈಸರ್ ಪಾಷಾ ತನ್ನ ಹೆಂಡತಿಯ ಸಾವಿಗೆ ಕಾರಣನಾಗಿದ್ದಾನೆನ್ನಲಾಗಿದೆ. ಸಾಯುವ ಮುನ್ನ ರಫಿಯಾಬಾನು ತೀವ್ರವಾದ ಹಿಂಸೆಗೆ ಒಳಪಟ್ಟಿದ್ದು ಕತ್ತನ್ನು ಬಲವಾಗಿ ಹಿಸುಕಿರುವ ಕಾರಣ ಮೃತಪಟ್ಟಿರುತ್ತಾಳೆ. ಮೃತಪಟ್ಟ ನಂತರ ಆವಳ ದೇಹವನ್ನು ಸುಡಲಾಗಿದೆ. ಮೇಲೆ ತೇಲಿದ ಕಣ್ಣುಗಳು, ಹೊರಚಾಚಿದ ನಾಲಿಗೆ, ಬಾಯಿಂದ ಹರಿದು ಹೆಪ್ಪುಗಟ್ಟಿದ ರಕ್ತ, ಅರೆಬೆಂದು ಕರುಕಲಾಗಿದ್ದ ಬೆತ್ತಲೆ ದೇಹವನ್ನು ನೋಡುವಾಗ ಕರುಳು ಬಾಯಿಗೆ ಬರುವಂತಾಗಿತ್ತು.

ಮಧ್ಯಾಹ್ನವಷ್ಟೆ ಅಕ್ಕನ ಕೈಯಲ್ಲಿ ಊಟಮಾಡಿ ಬಂದ ತಮ್ಮ, ಗಂಡನ ಮನೆಯಲ್ಲಿ ತಮ್ಮ ಮಗಳು ಸುಖವಾಗಿರುವಳೆಂದು ನಂಬಿದ ತಂದೆ-ತಾಯಿಗಳಿಗೆ ಸುಟ್ಟು ಕರುಕಲಾಗಿದ್ದ ತಮ್ಮ ಮಗಳನ್ನು ನೋಡಿ ಹೇಗಾಗಿರಬೇಡ ? ರಫಿಯಾಳ ಈ ಅಸ್ವಾಭಾವಿಕ ಸಾವನ್ನು ಮಹಜರು ಮಾಡಿದ ತಹಸೀಲ್ದಾರರು ಇದೊಂದು ಕೊಲೆಯೆಂದೇ

20ನೇ ಪುಟಕ್ಕೆ

19ನೇ ಪುಟದಿಂದ

ವರದಿ ಸಲ್ಲಿಸಿರುತ್ತಾರೆ. ಐ. ಪಿ. ಸಿ. ಸೆಕ್ಷನ್ 308 ರ ಪ್ರಕಾರ ಕೂಡಲೇ ಗಂಡನನ್ನು ಪೋಲೀಸರು ಬಂಧಿಸಿ ಕೇಸು ಹಾಕಿದ್ದರೂ ಆಪಾದಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಹಣದಾಸೆಗಾಗಿ ಹೆಂಡತಿಯ ಸಾವಿಗೆ ಕಾರಣನಾದ ಖೈಸರ್ ಪಾಷಾನನ್ನು ಕೂಡಲೇ ಬಂಧಿಸಿ ಶಿಕ್ಷೆಗೊಳಪಡಿಸುವಂತೆ ಒತ್ತಾಯಿಸಲು ಸಮತಾ ವೇದಿಕೆ ದಿ. 27-3-90 ರಂದು ಶ್ರೀರಂಗಪಟ್ಟಣದ ಮುಖ್ಯ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿತು. ಅಧಿಕ ಸಂಖ್ಯೆಯಲ್ಲಿ ಮುಸ್ಲಿಂ ಮಹಿಳೆಯರು ಪಾಲ್ಗೊಂಡಿದ್ದ ಈ ಮೆರವಣಿಗೆಯಲ್ಲಿ ಸುಮಾರು 500 ಕ್ಕೂ ಹೆಚ್ಚು ಜನರಿದ್ದರು. ಖೈಸರ್ ಪಾಷಾನನ್ನು ಕೂಡಲೇ ಬಂಧಿಸುವ, ವರದಕ್ಷಿಣೆಯನ್ನು ಖಂಡಿಸುವ, ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಹಾಗೂ ಅಪರಾಧಿಗಳನ್ನು ಬೆಂಬಲಿಸುವ ರಾಜಕಾರಣಿಗಳ, ವಿರುದ್ಧ ಘೋಷಣೆಗಳನ್ನು ಕೂಗಲಾಗಿತ್ತು. ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಖೈಸರ್ ಪಾಷಾನಂತಹವರನ್ನು ಸಾಮಾಜಿಕವಾಗಿ ಬಹಿಷ್ಕರಿಸುವಂತೆ ಒತ್ತಾಯಿಸಲಾಯಿತು.

14ನೇ ಪುಟದಿಂದ

ವಿಷಯವೂ ಅಲ್ಲ. ಆ ಭಾಷೆಯನ್ನು ಆಡುವ ಸಮಾಜದ ಹೆಣ್ಣಿನ ಸ್ಥಾನಮಾನವನ್ನು ಅದು ಸ್ಪಷ್ಟವಾಗಿ ಬಿಚ್ಚಿ ತೋರಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹೆಣ್ಣಿನ ಪ್ರಗತಿಯ ಬಗ್ಗೆ ಎಷ್ಟೇ ಮಾತನಾಡಿದರೂ ಇವೆಲ್ಲ ಒಂದೇ ದಿನದಲ್ಲಿ ಬದಲಾಗುವ ಕ್ರಿಯೆಯಲ್ಲ. ರೂಢಿಯಲ್ಲಿ ಬಂದು ಆಳವಾಗಿ ಬೇರುಬಿಟ್ಟಿರುವ ಇಂತಹ ಭಾಷಾ ಬಳಕೆಗೆ ಮಾನಸಿಕ, ಬೌದ್ಧಿಕ ಸಂಕಲ್ಪವಿಲ್ಲದೆ ಬದಲಾವಣೆ ತರುವುದು ಕಷ್ಟ. ಪ್ರಗತಿರಂಗದ ಮುಂಚೂಣಿಯಲ್ಲಿರುವವರು ತಮ್ಮ ಜಾಣ, ಜಾಣೆಯರಿಗೆ ತಮಾಷೆಗಾಗಿಯೂ ಇಂತಹ ಹುಚ್ಚುತನದ ವಿಚಾರಗಳನ್ನು ಹೇಳುವುದನು ನಿಲ್ಲಿಸಲಿ. ●

Reg. No. MAG (5) PRC. DECL 039/86-87

BOOK-POST/PERIODICALS

To,

If undelivered please return to :
Jagruthi Mahila Adhyayana Kendra
26, 1st Main Road, Vyalikaval
Bangalore-560 003